# ಕುವೆಂಪು ವಿಶ್ವವಿದ್ಯಾಲಯ

# ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ಸಭಾ ದಿನಾಂಕ : 28–02–2022

ಪ್ರಾಧಿಕಾರಗಳ ವಿಭಾಗ

ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451

ಶಿವಮೊಗ್ಗ ಜಿಲ್ಲೆ.

ಫ್ಯಾಕ್ಸ್: 08282-256262
ಇ-ಮೇಲ್:drsyndicateku@gmail.com

☎ 08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ- 577 451

ಸಂಖ್ಯೆ: ಕುವಿ:ಯುಎಟಿ-I:ಸಿಂ-I:22: 04 :2021-22 ದಿನಾಂಕ:04-04-2022
06-04-2022

ಮಾನ್ಯರೆ,

ವಿಷಯ: ದಿನಾಂಕ:28-02-2022 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ-III ರ ಪ್ರಕರಣ- 16 ರನ್ವಯ ದಿನಾಂಕ:28-02-2022 ರಂದು ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು - ಅಧ್ಯಾಯ-IIIರ ಪ್ರಕರಣ - 16 ರ ಪ್ರಕಾರ ಸದರಿ ನಡಾವಳಿಗಳು ತಲುಪಿದ 07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

**ವಿ.ಸೂ.: ಸದರಿ ನಡಾವಳಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಯಥಾವತ್ತಾಗಿ ಪ್ರಕಟಿಸಲಾಗಿದೆ.**

ತಮ್ಮ ವಿಶ್ವಾಸಿ,

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) **ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.**
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಚಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19) ಕಛೇರಿ ಪ್ರತಿ / ರಕ್ಷಣಾ ಕಡತ.

# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:28-02-2022 ರಂದು ಸೋಮವಾರ ಪೂರ್ವಾಹ್ನ : 10.30 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ "ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.**

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀಮತಿ ಅನುರಾಧ ಜಿ. ಕೆ.ಎ.ಎಸ್.(ಆಯ್ಕೆ ಶ್ರೇಣಿ) ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಸಿ.ಎಂ. ತ್ಯಾಗರಾಜ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ಅಶೋಕ್ ಡಿ. ರೇವಣ್‌ಕರ್, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ಬಿ. ನಿರಂಜನ ಮೂರ್ತಿ | ಸದಸ್ಯರು |
| 6. | ಶ್ರೀ ಎಸ್. ಆರ್. ಮಂಜುನಾಥ | ಸದಸ್ಯರು |
| 7. | ಶ್ರೀ ಹೆಚ್. ಬಿ. ರಮೇಶಬಾಬು | ಸದಸ್ಯರು |
| 8. | ಶ್ರೀ ಬಳ್ಳೇಕೆರೆ ಸಂತೋಷ್ | ಸದಸ್ಯರು |
| 9. | ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ | ಸದಸ್ಯರು |
| 10. | ಶ್ರೀ ಧರ್ಮಪ್ರಸಾದ್ ಜಿ. | ಸದಸ್ಯರು |
| 11. | ಶ್ರೀ ರಾಮಲಿಂಗಪ್ಪ ಹೆಚ್. | ಸದಸ್ಯರು |
| 12. | ಶ್ರೀ ಎಸ್. ಆರ್. ನಾಗರಾಜ್ | ಸದಸ್ಯರು |
| 13. | ಪ್ರೊ. ಹೆಚ್.ಎನ್. ರಮೇಶ್ | ಸದಸ್ಯರು |
| 14. | ಪ್ರೊ. ಕೃಷ್ಣ ವಿ., ಪ್ರಾಧ್ಯಾಪಕರು | ಸದಸ್ಯರು |
| 15. | ಶ್ರೀ ರಾಜಶೇಖರ ಪಿ. ಬಿ. ಪ್ರಾಂಶುಪಾಲರು | ಸದಸ್ಯರು |
| 16. | ಶ್ರೀಮತಿ ಭಾರತಿ, ಪ್ರಾಂಶುಪಾಲರು | ಸದಸ್ಯರು |
| 17. | ಶ್ರೀ ನಟೇಶ್ ಎಸ್., ಎಂ., ಪ್ರಾಂಶುಪಾಲರು | ಸದಸ್ಯರು |
| 18. | ಡಾ. ಧನಂಜಯ ಬಿ.ಜಿ., ಪ್ರಾಂಶುಪಾಲರು | ಸದಸ್ಯರು |

ಗೈರುಹಾಜರಾದ ಸದಸ್ಯರು:

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:

ಯಾರು ಇರುವುದಿಲ್ಲ.

ಪ್ರಸ್ತಾವನೆ: ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಆನ್‌ಲೈನ್ ಮೂಲಕ ಸಭೆಯಲ್ಲಿ ಭಾಗವಹಿಸಿದ ಸದಸ್ಯರನ್ನೂ ಕೂಡ ಸಭೆಗೆ ಸ್ವಾಗತಿಸಲಾಯಿತು. ಡೀನರ ಜ್ಯೇಷ್ಠತೆಗನುಸಾರವಾಗಿ ಸರದಿಯ ಮೇಲೆ ಒಂದು ವರ್ಷದ ಅವಧಿಗೆ ಮಾನ್ಯ ಕುಲಪತಿಯವರಿಂದ ನಾಮ ನಿರ್ದೇಶಿತರಾದ ನೂತನ ಸದಸ್ಯರಾದ ಪ್ರೊ. ಹೆಚ್.ಎನ್. ರಮೇಶ್, ರವರಿಗೆ ಹಾಗೂ ಪ್ರಾಂಶುಪಾಲರ ಜೇಷ್ಠತೆಯ ಮೇರೆಗೆ ಸರದಿಯ ಮೇಲೆ ಒಂದು ವರ್ಷದ ಅವಧಿಗೆ ಮಾನ್ಯ ಕುಲಪತಿಯವರಿಂದ ನಾಮ ನಿರ್ದೇಶಿತರಾದ ನೂತನ ಸದಸ್ಯರಾದ ಶ್ರೀ ರಾಜಶೇಖರ್ ಪಿ.ಬಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಜ್ಜಂಪುರ, ಶ್ರೀಮತಿ ಭಾರತಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಶೃಂಗೇರಿ, ಶ್ರೀ ನಟೇಶ್ ಎಸ್.ಎಂ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಮಗಳೂರು ಮತ್ತು ಶ್ರೀ ಧನಂಜಯ ಬಿ.ಜಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಭದ್ರಾವತಿ ಇವರುಗಳನ್ನು ಸಭೆಗೆ ಪರಿಚಯಿಸಿ ಆತ್ಮೀಯವಾಗಿ ಸ್ವಾಗತಿಸಿದರು. ಹಾಗೂ 2021-2022ನೇ ಸಾಲಿನಲ್ಲಿ ಸಮಾಜ ಸೇವೆಯಲ್ಲಿ ಮಾಡಿದ

ಸಾಧನೆಗಾಗಿ ದುಬೈನಲ್ಲಿ ಪ್ರಶಸ್ತಿ ಸ್ವೀಕರಿಸಲಿರುವ ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರನ್ನು ಅಭಿನಂದಿಸಲಾಯಿತು.

ಮುಂದುವರೆದು, ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು ಎಲ್ಲರಿಗೂ ಅಂತರರಾಷ್ಟ್ರೀಯ ವಿಜ್ಞಾನ ದಿನದ ಶುಭಾಷಯಗಳು ಎಂದರು. ಸಿಂಡಿಕೇಟಿನ ಎಲ್ಲಾ ಸದಸ್ಯರಿಗೂ ಸಭೆಗೆ ಸ್ವಾಗತ ಕೋರುತ್ತೇನೆ. ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಯುಜಿಸಿ / ಸರ್ಕಾರದ ಮಾರ್ಗಸೂಚಿಗಳನ್ವಯ ಕ್ರಮಕೈಗೊಳ್ಳಲಾಗಿದೆ. ಕೆಲವೊಂದು ನ್ಯೂನತೆಗಳು ಇರಬಹುದು ಅದರಿಂದ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ತೊಡಕಾಗಬಾರದು. ನಮ್ಮ ವಿಶ್ವವಿದ್ಯಾಲಯವು ಅಥೇನ್ಸ್ ವಿಶ್ವವಿದ್ಯಾಲಯದೊಂದಿಗೆ ಶೈಕ್ಷಣಿಕ ಒಡಂಬಡಿಕೆ (ಎಂ.ಒ.ಯು) ಮಾಡಿಕೊಂಡಿದೆ. ವಿಶ್ವವಿದ್ಯಾಲಯ / ಸಿಂಡಿಕೇಟ್ ಎಂದರೆ ನಾನೊಬ್ಬನೇ ಅಲ್ಲ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ನಮ್ಮ ಮೇಲೆ ದೊಡ್ಡ ಜವಾಬ್ದಾರಿಯಿದೆ. ವಿದ್ಯಾರ್ಥಿಗಳು ಹಾಗೂ ಬೋಧಕರ ಜೊತೆಯಲ್ಲಿ ಸಮನ್ವಯ ಕಾಯ್ದುಕೊಳ್ಳಬೇಕು. ಅದಕ್ಕೆ ನಿಮ್ಮೆಲ್ಲರ ಸಹಕಾರ ಸಲಹೆ ಬೇಕು ಎಂದು ಹೇಳಿದರು.

ನಮ್ಮ ವಿಶ್ವವಿದ್ಯಾಲಯವು ಕರ್ನಾಟಕದಲ್ಲಿ ಮಾದರಿ ವಿಶ್ವವಿದ್ಯಾಲಯವಾಗಿದೆ. ಎನ್.ಐ.ಆರ್.ಎಫ್/ ನ್ಯಾಕ್/ ಸಿಮ್ಯಾಗೋ ದಲ್ಲಿ ಒಳ್ಳೆಯ ರ್‍ಯಾಂಕ್ ಬಂದಿದೆ. ದೇಶದ 5000 ವಿಶ್ವವಿದ್ಯಾಲಯಗಳಲ್ಲಿ 46ನೇ ಸ್ಥಾನ ಪಡೆದಿದೆ. ಇದು ವಿಶ್ವವಿದ್ಯಾಲಯಕ್ಕೆ ಗರಿಯಲ್ಲವೇ. ಮೈಸೂರು ವಿಶ್ವವಿದ್ಯಾಲಯವನ್ನು ಹಿಂದಿಕ್ಕಿದೆ ಕರ್ನಾಟಕದ 78 ವಿಶ್ವವಿದ್ಯಾಲಯಗಳ ನಡುವೆ ಕುವೆಂಪು ವಿಶ್ವವಿದ್ಯಾಲಯವು ಮೊದಲನೇ ಸ್ಥಾನದಲ್ಲಿದೆ. ಈ ಹಿನ್ನೆಲೆಯಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಸಹ ನಮ್ಮ ವಿಶ್ವವಿದ್ಯಾಲಯದ ಬಗ್ಗೆ ಬಹಳ ಒಳ್ಳೆಯ ಅಭಿಪ್ರಾಯ ಹೊಂದಿದ್ದಾರೆ ಎಂದರು.

ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ವಿಶ್ವದ ಎಲ್ಲಾ ಕಡೆ ಇದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಮುಂದಿನ ಭವಿಷ್ಯ ಹೇಗಿರಬೇಕು ಎಂಬ ಮುಂದಾಲೋಚನೆ ಇಟ್ಟುಕೊಂಡು ನಾವು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು. ಈ ಸಂದರ್ಭದ ಬೆಳವಣಿಗೆಗಳು ಸರಿ ಇಲ್ಲ ನಾವಿದರಿಂದ ಹೊರಬರಬೇಕಾಗಿದೆ ನಾನು ನಿಮ್ಮೊಂದಿಗಿದ್ದೇನೆ ಎಂದರು. ಮತ್ತೊಮ್ಮೆ ಎಲ್ಲರಿಗೂ ಸ್ವಾಗತ ಎಂದರು.

ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರು ಮಾತನಾಡಿ ವಿಶ್ವವಿದ್ಯಾಲಯಕ್ಕೆ ಇದ್ದ ಒಳ್ಳೆಯ ಹೆಸರನ್ನು ನೀವು ಬಂದ ಮೇಲೆ ತೊಳೆದು ಹಾಕಿದ್ದೀರಿ ಎಂದರು. ಹೇಗೆ ಎಂದು ಮಾನ್ಯ ಕುಲಪತಿಗಳು ಪ್ರಶ್ನಿಸಿದರು, ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡಿ ಈಗ ಈ ವಿಷಯ ಬೇಡ ಈಗ ವಿಶ್ವವಿದ್ಯಾಲಯದ ಶೈಕ್ಷಣಿಕ / ನೌಕರರು ಮತ್ತು ವಿದ್ಯಾರ್ಥಿಗಳ ವಿಷಯಕ್ಕೆ ಸಂಬಂಧಪಟ್ಟ ವಿಷಯಗಳು ಅಜೆಂಡಾದಲ್ಲಿದ್ದರೆ ಅದನ್ನು ಮೊದಲು ಚರ್ಚಿಸೋಣ ಎಂದರು. ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥರವರು ಮಾತನಾಡಿ ಅಜೆಂಡಾ ವಿಷಯ ಮೊದಲು ಚರ್ಚೆ ಮಾಡಿ ನಂತರ ಬೇರೆ ವಿಷಯ ತೆಗೆದುಕೊಳ್ಳೋಣ ನೌಕರರಿಗೆ ತೊಂದರೆಯಾಗಬಾರದು ಎಂದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಕಳೆದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಜಾರಿಗೆ ತರುವುದಾಗಿ ಭರವಸೆ ಕೊಡುವಂತೆ ಕೋರಿದರು. ಸಿಂಡಿಕೇಟ್ ಸಭೆಗೆ ಇರುವ ಮೌಲ್ಯ ನಿರ್ಣಯಗಳು ಜಾರಿಗೆ ಬರದಿದ್ದರೆ ಅಪಮೌಲ್ಯ ಆಗುತ್ತದೆ ಎಂದರು.

ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥರವರು ಮಾತನಾಡಿ ಸಭೆಯ ನಿರ್ಣಯಗಳು ಜಾರಿಗೆ ಬರಲೇಬೇಕು, ಯಾಕೆ ಬಂದಿಲ್ಲ ಜಾರಿಗೆ ತರದ ಅಧಿಕಾರಿಗಳ ವಿರುದ್ಧ ಕ್ರಮ / ಶಿಕ್ಷೆ ಆಗಬೇಕು ಎಂದರು.

ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ಹಿಂದಿನ ಕುಲಸಚಿವರು ಇದ್ದಾಗಲೂ ಸಹಕಾರ ಇರಲಿಲ್ಲ ಈಗಲೂ ಇಲ್ಲ. ಕುಲಸಚಿವರು ಒಂದು ನಿರ್ಣಯ ಮಾಡಿದರೆ ತಾವೊಂದು ನಿರ್ಣಯ ತೆಗೆದುಕೊಳ್ಳುತ್ತೀರಿ. ಕುಲಸಚಿವರ ಸಲಹೆ / ಸಹಕಾರ ತೆಗೆದುಕೊಳ್ಳಬೇಕು ಕುವೆಂಪು ವಿಶ್ವವಿದ್ಯಾಲಯದ ದೂರ ಶಿಕ್ಷಣದ ಕುರಿತು ಇಡೀ ದೇಶವೇ ಮಾತನಾಡುತ್ತಿದೆ. ಪ್ರತಿ ದಿನ ಎಲ್ಲಾ ದಿನಪತ್ರಿಕೆ/ ಮಾಧ್ಯಮಗಳಲ್ಲೂ ಇದೇ ಸುದ್ದಿ. ವಿಶ್ವವಿದ್ಯಾಲಯದ ಎಲ್ಲಾ ಸಿಂಡಿಕೇಟ್ ಸದಸ್ಯರು ತಮಗೆ ಸಹಕಾರ

ನೀಡುತ್ತಿದ್ದೇವೆ. ಆದರೆ ತಾವು ಸರಿಯಾಗಿ ಸಿಂಡಿಕೇಟ್ ಸಭೆ ಕರೆಯುತ್ತಿಲ್ಲ. ಯಾವಾಗಲೋ ಸಭೆ ಕರೆಯುತ್ತೀರಿ. ಸಭೆ ರದ್ದುಪಡಿಸುತ್ತೀರಿ. ನಿರಂಜನ್ ಸರ್ ಅವರು ಕಡೂರು ತನಕ ಬಂದು ವಾಪಾಸ್ ಹೋಗಿದ್ದಾರೆ ನಾವು ಕೂಡ ಬಂದು ಹೋಗಿದ್ದೇವೆ ಇಷ್ಟ ಬಂದ ಹಾಗೆ ಮಾಡುವುದೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ವಿಷಯ ಉಚ್ಚನ್ಯಾಯಾಲಯದಲ್ಲಿರುವುದರಿಂದ ಸಭೆ ಮುಂದೂಡಲಾಯಿತು ಎಂದರು.

ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರು ಮಾತನಾಡಿ ಬೇರೆ ಸಭೆ ಆದರೆ ನಿರ್ಣಯ ಮಾಡಲು 75 ದಿನ ಬೇಕು ದೂರ ಶಿಕ್ಷಣದ ವಿಷಯವಾದರೆ ಒಂದೇ ದಿನದಲ್ಲಿ ಆಗಬೇಕು ಅಲ್ಲವೇ ಎಂದರು. ವಿಶ್ವವಿದ್ಯಾಲಯದ ವಿಷಯಗಳನ್ನು ಚರ್ಚಿಸಲು ನಾವು 8 ಜನ ಸದಸ್ಯರು ಹೋದಾಗಲೂ ನಮಗೆ ಗೌರವ ಕೊಟ್ಟಿಲ್ಲ. ಶೈಕ್ಷಣಿಕ ವಿಷಯಗಳ ಕುರಿತು ಚರ್ಚೆ ಮಾಡುತ್ತಿದ್ದೇವೆ ಅನ್ನುತ್ತೀರ. ತಾವು ಬಂದ ಮೇಲೆ ಸರ್ಕಾರದಿಂದ ಎಷ್ಟು ಅನುದಾನ ತಂದಿದ್ದೀರಿ ತಿಳಿಸಿ ಎಂದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಹಾಗೂ ಶ್ರೀ ರಮೇಶ್‌ಬಾಬುರವರು ಮಾತನಾಡಿ ಇದು ಅಧಿಕೃತ ಸಭೆ ತಾವು ಈ ವಿಷಯಗಳನ್ನು ಟಿಪ್ಪಣಿ ಮಾಡಿಕೊಂಡು ಉತ್ತರ ಕೊಡಬೇಕು ಎಂದರು. ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಕಳೆದ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದ ವಿರುದ್ಧವಾಗಿ ನಿರ್ಣಯ ತೆಗೆದುಕೊಂಡು ಅದು ಜಾರಿ ಕೂಡ ಆಗಿದೆ. ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯ ಹಾಗೂ ಕೋರ್ಟ್‌ನಲ್ಲಿರುವ ವಿಷಯವನ್ನು ಧಿಕ್ಕರಿಸಿ ಏಕಾಏಕಿ ಒಬ್ಬರೇ ನಿರ್ಣಯ ತೆಗೆದುಕೊಂಡಿದ್ದು ಎಷ್ಟು ಸರಿ ಎಂದರು.

ಸದಸ್ಯರಾದ ಶ್ರೀ ರಮೇಶ್ ಬಾಬುರವರು ಮಾತನಾಡಿ ಅಧ್ಯಕ್ಷರು ಮತ್ತು ಕುಲಸಚಿವರು ತಾವು ನಿಯಮಾನುಸಾರ ಕ್ರಮ ಕೈಗೊಳ್ಳುತ್ತೇವೆ ಎನ್ನುತ್ತಾರೆ ಆದರೆ ದಿನಾಂಕ:27-10-2021ರಲ್ಲಿ ಸಿಂಡಿಕೇಟ್ ಸಭೆ ನಡೆದ ಮೇಲೆ ಇದುವರೆಗೆ ಸಭೆ ನಡೆದಿಲ್ಲ. ಈ ಸಭೆಯ ಅಜೆಂಡಾ ಕೂಡ ನನಗೆ ತಲುಪಿಲ್ಲ ಎಂದರು. ಹಾಗೂ ನಾನು ವಿಶ್ವವಿದ್ಯಾಲಯಕ್ಕೆ 5 ಪತ್ರಗಳನ್ನು ಬರೆದಿದ್ದೇನೆ ಒಂದಕ್ಕೂ ಉತ್ತರ ಬಂದಿಲ್ಲ ಎಂದರು,

ಕುಲಸಚಿವರು ಮಾತನಾಡಿ ಶಿವಮೊಗ್ಗದಲ್ಲಿ ಪರಿಸ್ಥಿತಿ ಸರಿ ಇರಲಿಲ್ಲ, ಕರ್ಫ್ಯೂ ಇದ್ದ ಕಾರಣ ಕೊರಿಯರ್ ಸೇವೆ ಇರಲಿಲ್ಲ ಆದ ಕಾರಣ ಅಜೆಂಡಾ ಕಳುಹಿಸುವುದು ವಿಳಂಬ ಆಗಿದೆ ಎಂದರು. ತಾವು ಬರೆದಿರುವ ಪತ್ರಗಳಿಗೆ ಉತ್ತರವನ್ನು ಈಗಾಗಲೇ ಕಳುಹಿಸಲಾಗಿದೆ ಎಂದು ಹೇಳಿದರು.

ಪುನ: ಶ್ರೀ ರಮೇಶ್ ಬಾಬುರವರು ಮಾತನಾಡಿ ನಾವು ಬಂದಾಗಿನಿಂದ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಎಷ್ಟು ಸಲಹೆ ಕೊಟ್ಟಿದ್ದೇವೆ. ತಾವು ಏನು ಮಾಡಿದ್ದೀರಿ ಈ ಸಭೆ ಮುಗಿದ ಬಳಿಕ ವಿಶ್ವವಿದ್ಯಾಲಯಕ್ಕೆ ತಮ್ಮ ಅವಧಿಯಲ್ಲಿ ಎಷ್ಟು ಅನುದಾನ ಬಂದಿದೆ, ಎಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೀರಿ. ಎಷ್ಟು ಕಟ್ಟಡ ಕಟ್ಟಿದ್ದೀರಿ, ಎಷ್ಟು ಅಧ್ಯಯನ ಕೇಂದ್ರ ಶುರು ಮಾಡಿದ್ದೀರಿ ಎಂಬ ಮಾಹಿತಿಯನ್ನೊಳಗೊಂಡ ಪಟ್ಟಿ ಬೇಕು ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ದಿನಾಂಕ:09-02-2022 ರಂದು ನಾವು ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರಿಗೆ ಮನವಿ ಕೊಟ್ಟಿದ್ದೆವು ಅದಕ್ಕೆ ನಮಗೆ ಉತ್ತರ ಬಂದಿಲ್ಲ. ಈಗ ಭ್ರಷ್ಟಾಚಾರ ನಡೆದಿರುವ ಸುಳಿವು ಇರುವುದರಿಂದ ಅಧ್ಯಕ್ಷರ ಮೇಲೆ ಇರುವ ವಿಶ್ವಾಸದ ಪ್ರಶ್ನೆ ಎದುರಾಗಿದೆ ಎಂದರು. ಸಾರ್ವಜನಿಕವಾಗಿ ವಿಶ್ವವಿದ್ಯಾಲಯದ ಘನತೆ ನುಚ್ಚು ನೂರಾಗಿದೆ ಆದರೆ ವಿಶ್ವವಿದ್ಯಾಲಯ ನಡೆಯಲೇಬೇಕು, ಹಾಗಾಗಿ ಮುಖ್ಯವಾಗಿ ವಿದ್ಯಾರ್ಥಿಗಳು / ನೌಕರರ ವಿಷಯಗಳಿದ್ದಲ್ಲಿ ಸಭೆಯಲ್ಲಿ ಚರ್ಚೆ ಮಾಡೋಣ ನಂತರ ದೂರ ಶಿಕ್ಷಣದ ಫಲಿತಾಂಶದ ಕುರಿತು ಚರ್ಚಿಸಬೇಕು ಎಂದರು.

ಅಲ್ಲದೇ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ದ ಕಂಡಿಕೆ 15 ಉಪಕಂಡಿಕೆ (5)ರಲ್ಲಿ **"ಕುಲಪತಿಯು, ತ್ವರಿತ ಕ್ರಮವು ಅಗತ್ಯವೆಂದು ಅವನು ಅಭಿಪ್ರಾಯ ಪಡುವ ಯಾವುದೇ ತುರ್ತು ಸಂದರ್ಭದಲ್ಲಿ ಅವನು ಅವಶ್ಯವೆಂದು ಭಾವಿಸುವಂಥ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಆ ತರುವಾಯ**

ಅತಿ ಶೀಘ್ರ ಸಮಯದಲ್ಲಿ ಸಾಮಾನ್ಯವಾಗಿ ವ್ಯವಹರಿಸುತ್ತಿದ್ದಂಥ ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ವರದಿ ಮಾಡತಕ್ಕದ್ದು: ಪರಂತು, ಕುಲಪತಿಯು ತೆಗೆದುಕೊಂಡ ಕ್ರಮವನ್ನು ಸಂಬಂಧಪಟ್ಟ ಪ್ರಾಧಿಕಾರ ಅಥವಾ ನಿಕಾಯವು ಅನುಮೋದಿಸದಿದ್ದರೆ, ಅವರು ಆ ವಿಷಯವನ್ನು ಕುಲಾಧಿಪತಿಗೆ ಒಪ್ಪಿಸಬಹುದು, ಆ ಬಗ್ಗೆ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು: ಎಂದು ತಿಳಿಸಿದೆ. ಆದರೆ ತಾವು ಕೈಗೊಂಡ ನಿರ್ಣಯದ ಬಗ್ಗೆ ಸಿಂಡಿಕೇಟಿಗೆ ಮಂಡಿಸಿರುವುದಿಲ್ಲ. ಅದನ್ನು ನಂತರ ಚರ್ಚೆ ಮಾಡೋಣ ಎಂದರು.

ವೃತ್ತಿ ಪದೋನ್ನತಿಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ ಅತಿಥಿ ಉಪನ್ಯಾಸಕರುಗಳಿಗೆ ಬೇರೆ ವಿಶ್ವವಿದ್ಯಾಲಯಗಳು ಎಲ್ಲಾ ಸೌಲಭ್ಯಗಳನ್ನು ನೀಡುತ್ತಿವೆ ಆದರೆ ಇಲ್ಲಿ ನೀಡುತ್ತಿಲ್ಲ ಇವೆಲ್ಲದುದರ ಬಗ್ಗೆ ನಂತರ ಚರ್ಚೆ ಮಾಡೋಣ ನಮ್ಮ ಧೋರಣೆಯಿಂದ ವಿದ್ಯಾರ್ಥಿಗಳು / ನೌಕರರಿಗೆ ತೊಂದರೆಯಾಗಬಾರದು. ಆದ್ದರಿಂದ ಈಗ ಅಜೆಂಡಾದಂತೆ ವಿಷಯ ಚರ್ಚಿಸೋಣ ಎಂದರು.

ಇದಕ್ಕೆ ಒಪ್ಪದ ಸದಸ್ಯರಾದ ಶ್ರೀ ರಮೇಶ್ ಬಾಬುರವರು ನನ್ನ ಸಮ್ಮತವಿಲ್ಲ ಬಹಳ ದೊಡ್ಡ ಅಪರಾಧವಾಗಿದೆ. ಗವರ್ನರ್ ತೆಗೆದುಕೊಳ್ಳುವ ನಿರ್ಧಾರವನ್ನು ಕುಲಪತಿಗಳು ತೆಗೆದುಕೊಂಡಿದ್ದಾರೆ ಎಂದರು. ಶ್ರೀ ಹೆಚ್. ರಾಮಲಿಂಗಪ್ಪರವರು ಇದಕ್ಕೆ ಧ್ವನಿಗೂಡಿಸಿದರು.

ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಅದಕ್ಕೆ ತುಂಬಾ ಸಮಯ ಹಿಡಿಯುತ್ತದೆ ಈಗ ಬೇಡ ಮಧ್ಯಾಹ್ನ ತೆಗೆದುಕೊಳ್ಳೋಣ, ತುರ್ತು ಇರುವ ಮುಖ್ಯ ವಿಷಯಗಳಿಗೆ ತೊಂದರೆಯಾಗಬಾರದು ಎಂದರು. ನಾವೆಲ್ಲರೂ ದೂರ ಶಿಕ್ಷಣ ಫಲಿತಾಂಶ ಕೊಟ್ಟಿರುವುದರ ವಿರುದ್ಧ ಇದ್ದೀವಿ. ಈಗ ಬೋಧಕ / ಬೋಧಕೇತರ ಮತ್ತು ಏಜೆನ್ಸಿ ನೌಕರರ ವಿಷಯಗಳ ಕುರಿತು ಚರ್ಚಿಸೋಣ ಎಂದರು.

ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ಬೋಧಕರಿಗೆ ಸಂಬಂಧಿಸಿದ ಎಲ್ಲಾ ಕೆಲಸಗಳು / ಸೌಲಭ್ಯಗಳು ಕಾಲ ಕಾಲಕ್ಕೆ ಲಭ್ಯವಾಗುತ್ತವೆ ಆದರೆ ಅಧ್ಯಾಪಕೇತರ ನೌಕರರ ಯಾವ ಕೆಲಸಗಳು ಆಗುತ್ತಿಲ್ಲ ಎಂದರು.

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪರವರು ಮಾತನಾಡಿ, ಕುಲಸಚಿವರು ಶೀಘ್ರವಾಗಿ ಇಲಾಖಾ ಮುಂಬಡ್ತಿ ಸಭೆ ನಡೆಸಿ ಮುಂಬಡ್ತಿ ನೀಡುವುದಾಗಿ ತಿಳಿಸಿದ್ದರು. ಆದರೆ ಇದುವರೆಗೂ ಏನೂ ಮಾಡಿಲ್ಲ, ಸಿಂಡಿಕೇಟ್ ನಿರ್ಣಯ ಆಗಿ ಎರಡು ವರ್ಷಗಳೇ ಕಳೆದರೂ ನಿರ್ಣಯಗಳು ಜಾರಿಗೆ ಬಂದಿಲ್ಲ ಎಂದರು. ಇಂತಹ ತುಂಬಾ ವಿಷಯಗಳು ಇವೆ ಅದಕ್ಕೆ ಬಹಳ ಸಮಯ ಬೇಕಾಗುತ್ತದೆ ಎಂದು ಎಲ್ಲಾ ಸದಸ್ಯರು ಹೇಳಿದರು.

ಕುಲಸಚಿವರು ಮಾತನಾಡಿ ಈಗಾಗಲೇ ದಿನಾಂಕ:22-02-2022 ರಂದು ಒಂದು ಇಲಾಖಾ ಮುಂಬಡ್ತಿ ಸಭೆ ನಡೆಸಲಾಗಿದೆ. ಶೀಘ್ರದಲ್ಲೇ ಮುಂದಿನ ಸಭೆ ನಡೆಯಲ್ಲಿದ್ದು ಅದರಲ್ಲಿ ತೀರ್ಮಾನಿಸಲಾಗುವುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಇಷ್ಟೆಲ್ಲಾ ಏಕೆ ಆಗುತ್ತಿದೆ ಎಂದರೆ ರೆಗ್ಯುಲರ್ ಆಗಿ ಸಭೆಗಳನ್ನು ನಡೆಸದೇ ಇರುವುದೇ ಕಾರಣ, ಪ್ರತಿ ತಿಂಗಳು ಸಭೆ ಆಗಿದ್ದರೆ ಇಷ್ಟೊಂದು ವಿಷಯಗಳು ಬಾಕಿ ಇರುತ್ತಿರಲಿಲ್ಲ. ಪ್ರತಿ ತಿಂಗಳು ಸಭೆ ಕರೆಯಬೇಕು ಅಗ್ಯತ್ಯವಿದ್ದರೆ ವಿಶೇಷ ಸಭೆ ಕರೆಯಬೇಕು. ಎಲ್ಲಾ ಒಟ್ಟಿಗೆ ಆದರೆ ಯಾವ ವಿಷಯವೂ ಚರ್ಚೆ ಆಗುವುದಿಲ್ಲ ಎಂದರು.

ಸದಸ್ಯರಾದ ಶ್ರೀ ರಮೇಶ್ ಬಾಬುರವರು ದೂರಶಿಕ್ಷಣ ವಿದ್ಯಾರ್ಥಿಗಳಿಗೆ ಪ್ರಮೋಟ್ ಮಾಡಿರುವ ವಿಷಯದ ಚರ್ಚೆ ಈಗಲೇ ಆಗಬೇಕು ಎಂದರು. ಈ ವಿಷಯ ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯಾಗದೇ ಇರುವುದರಿಂದ ನಿರ್ಣಯ ತೆಗೆದುಕೊಂಡ ನಂತರ ಸಭೆಯಲ್ಲಿ ಅನುಮೋದನೆ ಪಡೆಯಬೇಕಿತ್ತು. ಆದರೆ ಅದು ಆಗಿಲ್ಲ ಎಂದರು.

ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ತಮಗೆ ಬೇಕಾದ ನಿರ್ಣಯ ಒಂದು ನಿಮಿಷದಲ್ಲಿ ತಾವು ತೆಗೆದುಕೊಳ್ಳುತ್ತೀರಿ. ದೂರ ಶಿಕ್ಷಣ ವಿದ್ಯಾರ್ಥಿಗಳನ್ನು ಪ್ರಮೋಟ್ ಮಾಡಿರುವ ವಿಷಯ ಯಾಕೆ ಸಿಂಡಿಕೇಟಿಗೆ ಮಂಡಿಸಿಲ್ಲ ಎಂದರು. ವಿದ್ಯಾವಿಷಯಕ ಪರಿಷತ್ತಿನಲ್ಲೂ ನಿರ್ಣಯವಾಗಿರುವುದಿಲ್ಲ ಎಂದು ಹೇಳಿದರು.

ಸದಸ್ಯರಾದ ಶ್ರೀ ಅಶೋಕ್ ಡಿ. ರೇವಣ್‌ಕರ್‌ರವರು ಮಾತನಾಡಿ ದಿನಪತ್ರಿಕೆಗಳು ಹಾಗೂ ಮಾಧ್ಯಮಗಳಲ್ಲಿ ಪ್ರತಿದಿನ ವಿಶ್ವವಿದ್ಯಾಲಯದ ನಡೆ ಬಗ್ಗೆ ವರದಿ ಪ್ರಕಟವಾಗುತ್ತಿದೆ ಇದರಿಂದ ವಿಶ್ವವಿದ್ಯಾಲಯಕ್ಕೆ ಕಪ್ಪು ಚುಕ್ಕೆ ಬಂದಿದೆ. ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತುಗಳನ್ನು ಬದಿಗಿಟ್ಟು ವಿದ್ಯಾರ್ಥಿಗಳನ್ನು ಪ್ರಮೋಟ್ ಮಾಡುವ ನಿರ್ಧಾರ ತೆಗೆದುಕೊಳ್ಳಲಾಗಿದೆ. ನಮ್ಮ ವಿಶ್ವವಿದ್ಯಾಲಯಕ್ಕೆ ಒಂದು ಘನತೆ ಇದೆ. ಈಗಲಾದರೂ ಎಚ್ಚೆತ್ತುಕೊಳ್ಳಬೇಕು. ಆಗಿರುವ ಡ್ಯಾಮೇಜ್ ಅಥವಾ ತಪ್ಪು ಆಗಿದ್ದರೆ ಅದನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ಯೋಚನೆ ಮಾಡಬೇಕಾಗಿದೆ ಎಂದರು.

ಸದಸ್ಯರಾದ ಪ್ರೊ. ವಿ. ಕೃಷ್ಣರವರು ಮಾತನಾಡಿ ನಾವು ಕೆಲಸಕ್ಕೆ ಸೇರಿದಾಗ ಅಧ್ಯಾಪಕರಿಗೆ ಕುಳಿತುಕೊಳ್ಳಲು ಜಾಗ ಇರಲಿಲ್ಲ ಅಂತಹ ಪರಿಸ್ಥಿತಿಯಿಂದ ಇಲ್ಲಿವರೆಗೂ ಬಂದಿದ್ದೇವೆ ಇದಕ್ಕೆ ಎಲ್ಲಾ ಅಧ್ಯಾಪಕ / ಅಧ್ಯಾಪಕೇತರ ನೌಕರರ ಕೊಡುಗೆ ಇದೆ. ನ್ಯಾಕ್ ಎನ್.ಐ.ಆರ್.ಎಫ್ ರ್‍ಯಾಂಕ್ ಬರಲು ಅಧ್ಯಾಪಕರ ಕೊಡುಗೆ ಇದೆ. ಈಗ ಆಗಿರುವ ತಪ್ಪನ್ನು ಸರಿಪಡಿಸಿಕೊಂಡು ಮುಂದೆ ಹೋಗಬೇಕಿದೆ ಎಂದರು.

ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ಕೆಲವೊಂದು ಕಾನೂನಾತ್ಮಕವಾಗಿ ತೆಗೆದುಕೊಳ್ಳಬೇಕಾದ ನಿರ್ಣಯಗಳ ಕುರಿತು ಕ್ರಮಕೈಗೊಳ್ಳಲು ಸಭೆಯು ಕುಲಪತಿ / ಕುಲಸಚಿವರಿಗೆ ಅಧಿಕಾರ ನೀಡುತ್ತದೆ. ಆದರೆ ಅಂತಹ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾದಾಗ ಅದರ ಸಾಧಕ / ಬಾಧಕಗಳನ್ನು ಪರಿಶೀಲಿಸಿ ತೆಗೆದುಕೊಳ್ಳಬೇಕಾಗುತ್ತದೆ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ಈ ವಿಷಯದ ಬಗ್ಗೆ ಆರು ತಿಂಗಳಿಂದ ಚರ್ಚೆ ನಡೆಯುತ್ತಿದೆ. ಎಲ್ಲಾ ಸಭೆಗಳಲ್ಲೂ ಹೇಳ್ತಾನೆ ಇದ್ದೇವೆ. ಪರೀಕ್ಷೆಗೆ ವೇಳಾಪಟ್ಟಿ ಹಾಕಿದ್ದೆವು, ಕೊರೊನಾ / ಒಮಿಕ್ರಾನ್ ಬಂದಿದ್ದರಿಂದ ಪರೀಕ್ಷೆ ನಡೆಸಲು ಆಗಲಿಲ್ಲ. ದೂರ ಶಿಕ್ಷಣದ ಹದಿನಾರು ಸಾವಿರ ವಿದ್ಯಾರ್ಥಿಗಳು ಫಲಿತಾಂಶಕ್ಕಾಗಿ ಕಾಯುತ್ತಿದ್ದರು. ಪರೀಕ್ಷೆ ನಡೆಸಲು ಆಗಲಿಲ್ಲ. ವಿದ್ಯಾರ್ಥಿಗಳು ಪದೇ ಪದೇ ದೂರವಾಣಿ ಕರೆ ಮಾಡುತಿದ್ದರು, ಕುಲಸಚಿವರು(ಪರೀಕ್ಷಾಂಗ) ಇವರಿಗೆ ಕರೆ ಮಾಡುತಿದ್ದರು ಯಾವುದಾದರು ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡರೆ ಏನು ಮಾಡುವುದು ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ನಿರ್ಣಯ ಕೈಗೊಳ್ಳಬೇಕಾಯಿತು ಎಂದರು. ಇವೆಲ್ಲದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವರದಿ ಕೇಳಿದ್ದಾರೆ, ಉನ್ನತ ಶಿಕ್ಷಣ ಸಚಿವರು ಸಹ ವರದಿ ಕೇಳಿರುತ್ತಾರೆ ನಾನು ಅವರಿಗೆ ಮಾಹಿತಿ ಕೊಡುತ್ತೇನೆ. ನಾನು ತೆಗೆದುಕೊಂಡಿರುವ ನಿರ್ಣಯ ಸರಿಯಿಲ್ಲ ಎಂದಾದರೆ ಅದನ್ನು ವಾಪಾಸ್ ಪಡೆಯುತ್ತೇನೆ ಎಂದರು.

ಶ್ರೀ ಧರ್ಮಪ್ರಸಾದ್ ಮಾತನಾಡಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ದ ಕಂಡಿಕೆ 15 ಉಪಕಂಡಿಕೆ (5)ರ ಪ್ರಕಾರ ತಮಗೆ ಪ್ರದತ್ತವಾದ ಅಧಿಕಾರ ಚಲಾಯಿಸಿದ ಮೇಲೆ ಅದನ್ನು ಪ್ರಾಧಿಕಾರಗಳಿಗೆ ಅನುಮೋದನೆಗಾಗಿ ಮಂಡಿಸಬೇಕಾಗಿತ್ತು ಆದರೆ ತಾವು ಮಂಡಿಸಿಲ್ಲ ಎಂದರು.

ಆಗ ಮಾನ್ಯ ಕುಲಪತಿಗಳು ಮಾತನಾಡಿ ನೀವೆಲ್ಲ ಮುಖ್ಯ ಮಂತ್ರಿಗಳು ಮತ್ತು ರಾಜ್ಯಪಾಲರಿಗೆ ದೂರು ಕೊಡಲು ಹೋಗಿದ್ದಿರಲ್ಲ, ಹಾಗಾಗಿ ಅವರಿಗೆ ನಾನು ವರದಿಯನ್ನು ಸಲ್ಲಿಸುತ್ತೇನೆ ಎಂದು ಹೇಳಿದರು.

ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಸಿಂಡಿಕೇಟ್ ನಿರ್ಣಯಕ್ಕೆ ವಿರುದ್ಧವಾಗಿ ಹೋಗುವ ಅಧಿಕಾರ ನಿಮಗಿಲ್ಲ. ಸಿಂಡಿಕೇಟ್ ಸಭೆ ಹಾಗೂ ವಿದ್ಯಾವಿಷಯಕ ಪರಿಷತ್ತು ಸಭೆ ಎರಡರಲ್ಲೂ ಪರೀಕ್ಷೆ ನಡೆಸಿಯೇ ಫಲಿತಾಂಶ ಕೊಡಬೇಕೆಂದು ಪೂರಕವಾದ ನಿರ್ಣಯ ತೆಗೆದುಕೊಂಡ ನಂತರ ಕಂಡಿಕೆ 15 ಉಪಕಂಡಿಕೆ (5)ರ ನಿರ್ಣಯ ತೆಗೆದುಕೊಳ್ಳಲು ಬರುವುದಿಲ್ಲ, ಅಲ್ಲದೇ ಕಂಡಿಕೆ 15 ಉಪಕಂಡಿಕೆ (5)ರ

ಪ್ರಕಾರ ನಿರ್ಣಯ ಕೈಗೊಂಡ ಮೇಲೆ ಸಕ್ಷಮ ಪ್ರಾಧಿಕಾರಗಳಲ್ಲಿ ಅನುಮೋದನೆಗಾಗಿ ಇಡಬೇಕು ಎಂದಿದೆ ಆದರೆ ತಾವು ಇದುವರೆಗೂ ಮಂಡಿಸಿರುವುದಿಲ್ಲ ಎಂದು ಹೇಳಿದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಸಿಂಡಿಕೇಟ್ ಸಭೆ ಹಾಗೂ ವಿದ್ಯಾವಿಷಯಕ ಪರಿಷತ್ತು ಸಭೆ ಎರಡರಲ್ಲೂ ಆಗದೇ ಇರುವುದರ ಬಗ್ಗೆ ನಿರ್ಣಯ ಮಾಡಲೇಬೇಕು ಎಂದಿದ್ದರೆ ರಾಜ್ಯಪಾಲರಿಗೆ ಬರೆಯಬೇಕಿತ್ತು ಎಂದರು. ಇವೆಲ್ಲಕ್ಕೂ ವಿವರಣೆ ಕೊಡಿ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ನಾವು ಎಷ್ಟು ದಿನದಿಂದ ಚರ್ಚೆ ಮಾಡ್ತಾ ಇದ್ದೀವಲ್ಲಾ ಎಂದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ದಿ:30-11-2021ರ ನಿರ್ಣಯವನ್ನು ಧಿಕ್ಕರಿಸಿದ್ದಾರೆ. ಯುಜಿಸಿ ಮಾರ್ಗಸೂಚಿಯಲ್ಲಿ ಪರೀಕ್ಷೆ ನಡೆಸುವ ಕುರಿತು ಇನ್ನೋವೇಟಿವ್ ಆಗಿ ಯೋಚನೆ ಮಾಡಿ ಪರೀಕ್ಷೆ ಮಾಡಿ ಎಂದು ಹೇಳಿದೆ. ಅದೆಲ್ಲವನ್ನು ಬಿಟ್ಟು ಕಂಡಿಕೆ 15 ಉಪಕಂಡಿಕೆ (5)ರ ಪ್ರಕಾರ ಮಾಡಿದ್ದೀವಿ ಎನ್ನುತಿದ್ದೀರಿ, ಯುಜಿಸಿ ಮಾರ್ಗಸೂಚಿ ಪಾಲಿಸಿಲ್ಲ ಪ್ರಮೋಟ್ ಮಾರ್ಗಸೂಚಿ ಪಾಲಿಸಿಲ್ಲ, ಆಂತರಿಕ ಅಂಕಗಳ ರೀ-ಸಬ್ಮಿಷನ್ ಗೆ ಅವಕಾಶ ಇಲ್ಲ, ಆದರೆ ನೀವೇನು ಮಾಡಿದ್ದೀರಿ. ದೂರ ಶಿಕ್ಷಣದ ವಿದ್ಯಾರ್ಥಿಗಳು ಕೂಡ ಅವರಿಗೆ ಸರಿಯಾದ ಮಾರ್ಗದರ್ಶನ ನೀಡಿದ್ದರೆ ನಾವು ಕೂಡ ಪರೀಕ್ಷೆ ತೆಗೆದುಕೊಳ್ಳುತಿದ್ದೆವು ಎಂದು ಹೇಳಿದ್ದಾರೆ. ಆದರೆ ತಾವು ಅದನ್ನೆಲ್ಲಾ ಬಿಟ್ಟು ಅಧ್ಯಯನ ಕೇಂದ್ರಗಳೊಂದಿಗೆ ಸೇರಿ ಕ್ರಮ ಕೈಗೊಂಡಿದ್ದೀರಿ ಎಂದು ಹೇಳಿದರು.

ಪ್ರಥಮ ಆವೃತ್ತಿಯ ವಿದ್ಯಾರ್ಥಿಗಳು ಯಾವ ದಿನಾಂಕದೊಳಗೆ ಇಂಟರ್‌ನಲ್ ಅಸೆಸ್‌ಮೆಂಟ್ ಸಲ್ಲಿಸಬೇಕಿತ್ತು ಯಾವಾಗ ಅಂಕ ನಮೂದಿಸಿದ್ದೀರಿ ಹೇಳಿ. ದಿ:07-02-2022ರಂದು ಮುಷ್ಕರ ನಡೆಯುತ್ತದೆ ಅದೇ ದಿನ ನಿರ್ಣಯ ತೆಗೆದುಕೊಂಡು ಅವತ್ತೇ ಫಲಿತಾಂಶ ಪ್ರಕಟವಾಗಿದೆ. ಇದು ಅನುಮಾನಕ್ಕೆ ಕಾರಣವಾಗಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ರಮೇಶ್‌ಬಾಬುರವರು ಮಾತನಾಡಿ ನಾವು ಸರ್ಕಾರ ಹಾಗೂ ರಾಜ್ಯಪಾಲರಿಂದ ಮೂರು ವರ್ಷದ ಅವಧಿಗೆ ನೇಮಕವಾಗುತ್ತೇವೆ ನಿಮಗೆ ಎಲ್ಲಾ ಸಹಕಾರ ಕೊಡುತ್ತೇವೆ ಶಿಕ್ಷಣ / ಸಂಶೋಧನೆಗೆ ಪೂರಕವಾದ ವಾತಾವರಣ ಕಲ್ಪಿಸಿ ವಿಶ್ವವಿದ್ಯಾಲಯದ ಅಭಿವೃದ್ದಿಯಾಗಬೇಕು ಎಂದು ಬಯಸಿದ್ದೇವೆ ಎಂದು ಮೊದಲೇ ಮಾನ್ಯ ಕುಲಪತಿಗಳಿಗೆ ತಿಳಿಸಿದ್ದೆವು ಆದರೆ ಇದು ಯಾವುದೂ ಆಗಿಲ್ಲ. ಅಲ್ಲದೇ ವಿಶ್ವವಿದ್ಯಾಲಯದ ಘನತೆ ಹಾಳು ಮಾಡುತ್ತೀರಿ ಎಂದರೆ ಹೇಗೆ ಸುಮ್ಮನಿರಲಾಗುತ್ತದೆ ಎಂದರು.

ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ಕೊವಿಡ್ ಪ್ರಮೋಟ್‌ನೊಂದಿಗೆ ಉತ್ತೀರ್ಣರಾದ ಇಂಜಿನಿಯರಿಂಗ್ ವಿದ್ಯಾರ್ಥಿಯೊಬ್ಬರಿಗೆ ಕೆಲಸಕ್ಕೆ ಅರ್ಹತೆ ಇಲ್ಲ ಎಂದು ಕಳುಹಿಸಿದ್ದಾರೆ. ಇದೇ ರೀತಿ ಪ್ರಮೋಟ್ ಆದ ನಮ್ಮ ವಿಶ್ವವಿದ್ಯಾಲಯದ ದೂರ ಶಿಕ್ಷಣದ ವಿದ್ಯಾರ್ಥಿಗಳಿಗೂ ತೊಂದರೆಯಾಗಬಹುದು ಎಂದರು.

ಕುಲಸಚಿವರು ಮಾತನಾಡಿ 2013ರಲ್ಲಿ ಐಐಎಸ್‌ಸಿ ಬೆಂಗಳೂರು- ಸಂಸ್ಥೆಯ ಪರಿಣಿತರು ಕುವೆಂಪು ವಿಶ್ವವಿದ್ಯಾಲಯದ ದೂರ ಶಿಕ್ಷಣದಲ್ಲಿ ವಿಜ್ಞಾನ ಪದವಿ ಪಡೆದ ವಿದ್ಯಾರ್ಥಿಗಳು ಸರ್ಕಾರವು ಭರ್ತಿ ಮಾಡುವ ಪದವಿಪೂರ್ವ ಉಪನ್ಯಾಸಕರ ಹುದ್ದೆಗಳಿಗೆ ಅರ್ಹರಿರುವುದಿಲ್ಲ ಎಂದು ತಿಳಿಸಿದೆ. ಆದ್ದರಿಂದ ಪರೀಕ್ಷೆಯನ್ನು ಮಾಡುವುದು ಉತ್ತಮ ತೀರ್ಮಾನವಾಗಿರುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಅಶೋಕ್ ಡಿ. ರೇವಣ್‌ಕರ್‌ರವರು ಮಾತನಾಡಿ 1985ರಲ್ಲಿ ತಾವು ನೇಮಕ ಆಗುವಾಗ ಕೊಲ್ಲಾಪುರ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದವರು ಕೆಲಸಕ್ಕೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ ಎಂದು ನಿಯಮವಿತ್ತು. ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಆ ಸ್ಥಿತಿ ಬರಬಾರದು ಎಂದರು.

ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ಯಾವ ಮಾರ್ಗ ಸೂಚಿಯನ್ವಯ ದೂರ ಶಿಕ್ಷಣದ ವಿದ್ಯಾರ್ಥಿಗಳಿಗೆ ಪ್ರಮೋಟ್ ಮಾಡಿದ್ದೀರಿ ಹೇಳಬೇಕು ಅಧ್ಯಕ್ಷರು ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ಒಂದು ಬಾರಿ ಅಲ್ಲ ಎರಡು ಬಾರಿ ಅಲ್ಲ ಹಲವಾರು ಬಾರಿ ದೂರ ಶಿಕ್ಷಣದ ಪರೀಕ್ಷೆ ಬಗ್ಗೆ ತೆರೆದ ಪುಸ್ತಕದ ಪರೀಕ್ಷೆ ಬಗ್ಗೆ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ ಸಭೆಗಳಲ್ಲಿ ಚರ್ಚೆಯಾಗಿದೆ. ನೀವೆಲ್ಲಾ ಹೇಳಿದ ವಿಷಯಗಳು ನನಗೆ ಗೊತ್ತಿದೆ. ಯಾಕೆ ಈ ಜಿಜ್ಞಾಸೆ / ಗೊಂದಲ ಆಯಿತು. ಚರ್ಚೆಯಲ್ಲಿ ಪರೀಕ್ಷೆ ಮಾಡೋಣ ಎಂದೇ ನಾನು ಹೇಳಿರುತ್ತೇನೆ. ವೇಳಾಪಟ್ಟಿಗಳನ್ನು ಪ್ರಕಟಿಸಲಾಗಿತ್ತು ವಿದ್ಯಾರ್ಥಿಗಳು ಕಾಲಾವಕಾಶ ಕೋರಿದ್ದರಿಂದ ಪರೀಕ್ಷೆ ಮುಂದೂಡಲಾಗಿತ್ತು. ಮಂಗಳೂರು / ಮೈಸೂರು / ಮುಕ್ತ ವಿಶ್ವವಿದ್ಯಾಲಯ / ಹತ್ತನೇ ತರಗತಿ ಮತ್ತು ಪಿಯುಸಿ ಇವರಿಗೆಲ್ಲಾ ಪ್ರಮೋಟ್ ಮಾಡಿದ್ದಾರೆ. ನೀವೆಲ್ಲಾ ಘನತೆವೆತ್ತ ರಾಜ್ಯಪಾಲರ ಬಳಿ ಹಾಗೂ ಉನ್ನತ ಶಿಕ್ಷಣ ಸಚಿವರ ಬಳಿ ಹೋದಾಗ ನನಗೆ ಏಕೆ ಹೇಳಿಲ್ಲ. ಎನ್.ಇ.ಪಿ ಮೀಟಿಂಗ್‌ನಲ್ಲಿ ಉನ್ನತ ಶಿಕ್ಷಣ ಸಚಿವರು ನಮ್ಮ ವಿಶ್ವವಿದ್ಯಾಲಯದ ಬಗ್ಗೆ ತುಂಬಾ ಪ್ರಶಂಸೆ ಮಾಡಿದ್ದರು. ಎಂತೆಂತಹ ಸಂದರ್ಭಗಳನ್ನು ಎದುರಿಸಿದ್ದೇವೆ. ವಿದ್ಯಾರ್ಥಿಗಳು ಎಲ್ಲರ ಬಳಿ ವ್ಯತಿರಿಕ್ತ ಹೇಳಿಕೆ ಕೊಟ್ಟಿರುತ್ತಾರೆ. ನಿಮ್ಮೊಂದಿಗೆ ಬಹಳ ಸಲ ಚರ್ಚೆ ಮಾಡಿದ್ದೇನೆ. ಕಾಣದ ಕೈಗಳು ಅಡ್ಡಗಾಲು ಹಾಕ್ತಾ ಇದೆ ಪರೀಕ್ಷೆ ಮಾಡಲು / ತೆರೆದ ಪುಸ್ತಕ ಪರೀಕ್ಷೆ ಮಾಡಲು ಎಲ್ಲದಕ್ಕೂ ಅಡ್ಡಿಪಡಿಸಿದರು. ನಾನು ಮತ್ತು ಕುಲಸಚಿವರು(ಪರೀಕ್ಷಾಂಗ)ರವರು ವಿಶ್ವವಿದ್ಯಾಲಯ ಧನಸಹಾಯ ಆಯೋಗ ನವದೆಹಲಿ (ಯುಜಿಸಿ)ಯ ಕಾರ್ಯದರ್ಶಿಯವರ ಹತ್ತಿರ ಹೋಗಿದ್ದೆವು, ಅವರು ಪ್ರಮೋಟ್ ಮಾಡಿ ಎಂದು ಹೇಳಿದ್ದರು. ಯುಜಿಸಿ / ಸರ್ಕಾರ ಮತ್ತು ಉಚ್ಚ ನ್ಯಾಯಾಲಯ ಎಲ್ಲವೂ ಆದೇಶ ಮಾಡಿದೆ. ಮಂಗಳೂರು / ಮೈಸೂರು / ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮತ್ತು ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯದವರು ಎಲ್ಲರೂ ಪ್ರಮೋಟ್ ಮಾಡಿದ್ದಾರೆ.

ಯುಜಿಸಿ/ ಸರ್ಕಾರದ ಆದೇಶದನ್ವಯ ಯಾಕೆ ಪ್ರಮೋಟ್ ಮಾಡ್ತಾ ಇಲ್ಲ ಎಂದು ಹದಿನಾರು ಸಾವಿರ ವಿದ್ಯಾರ್ಥಿಗಳು ಪ್ರಶ್ನೆ ಮಾಡುತ್ತಿದ್ದಾರೆ ಇವೆಲ್ಲವನ್ನು ಪರಿಶೀಲಿಸಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ದ ಕಂಡಿಕೆ 15 ಉಪಕಂಡಿಕೆ (5)ರನ್ವಯ ಪ್ರದತ್ತವಾದ ಅಧಿಕಾರ ಉಪಯೋಗಿಸಿ ನಿರ್ಣಯ ತೆಗೆದುಕೊಳ್ಳಲಾಗಿದೆ. ರಾಜ್ಯಪಾಲರು / ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು ನನಗೆ ಕರೆ ಮಾಡಿದ್ದು ವರದಿ ನೀಡುವಂತೆ ತಿಳಿಸಿದ್ದಾರೆ. ನಾನು ಅವರಿಗೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಯುಜಿಸಿ ಹಾಗೂ ಸರ್ಕಾರದ ಆದೇಶದ ಮೇರೆಗೆ ಕ್ರಮಕೈಗೊಂಡಿರುವುದಾಗಿ ವರದಿ ಮಾಡುತ್ತೇನೆ. ನಾನು ಮಾಡಿದ್ದು ತಪ್ಪು ಎಂದು ರಾಜ್ಯಪಾಲರು ತಿಳಿಸಿದರೆ ತಿದ್ದಿಕೊಳ್ಳುತ್ತೇನೆ ಎಂದರು.

ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ಉಚ್ಚ ನ್ಯಾಯಾಲಯದ ಆದೇಶ ತೋರಿಸಿ ಎಂದರು. ಅಲ್ಲದೇ ತಾವು ಸರ್ಕಾರದ ಆದೇಶವನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದೀರಿ ಎಂದರು. ಮುಷ್ಕರದಲ್ಲಿ ಹೆಚ್ಚು ಜನ ಇರಲಿಲ್ಲ ಅಲ್ಲದೇ ಯುಜಿಸಿ ಮಾರ್ಗಸೂಚಿಯಲ್ಲಿ 2019-20ರಲ್ಲಿ ಪ್ರಮೋಟ್ ಮಾಡುವಂತೆ ತಿಳಿಸಿತ್ತು ಆದರೆ ನೀವು ಈಗ 2022ರಲ್ಲಿ ಪ್ರಮೋಟ್ ಮಾಡಿರುತ್ತೀರಿ ಎಂದರು. ಈ ರೀತಿ ವಿದ್ಯಾರ್ಥಿಗಳಿಗೆ ತಪ್ಪು ಮೆಸೇಜ್ ಕೊಡುತ್ತೀರಿ ಎಂದರು.

ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮತ್ತು ಮೈಸೂರುಗಳಲ್ಲಿ 2022ರಲ್ಲೇ ನಿರ್ಣಯ ತೆಗೆದುಕೊಂಡಿರುವುದು ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿಯಲ್ಲಿ ಪ್ರಮೋಟ್ ಮಾಡಲು ಮಾರ್ಗಸೂಚಿ ಮಾಡಿಕೊಂಡಿದ್ದಾರೆ. ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಕೊಡಬೇಕು ಎಂದರೆ ಪರೀಕ್ಷೆ ಮಾಡಬೇಕು ಅಷ್ಟೆ ಎಂದರು.

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪ ಇವರು ಮಾತನಾಡಿ ದಿ:30-11-2021ರ ನಿರ್ಣಯದಲ್ಲಿ ಪರೀಕ್ಷೆ ನಡೆಸಿಯೇ ಫಲಿತಾಂಶ ನೀಡಬೇಕು ಎಂದಿತ್ತು. ಯುಜಿಸಿ-2021ರ ಆದೇಶದ ಪ್ರಕಾರ ಪರೀಕ್ಷೆ ಮಾಡಿಯೇ ಫಲಿತಾಂಶ ಕೊಡಬೇಕೆಂದಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಮಾನ್ಯ ಕುಲಪತಿಗಳು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆಯ ಪ್ರಕಾರ ನಡೆದುಕೊಳ್ಳುತ್ತಾರೋ ಇಲ್ಲವೋ ಎಂಬುದು ಪ್ರಶ್ನೆ. ನಿರ್ಣಯ ತೆಗೆದುಕೊಂಡಾದ ಮೇಲೆ ಸ್ಥಿರೀಕರಣಕ್ಕಾಗಿ ಸಭೆಗೆ ಮಂಡಿಸಬೇಕಾಗಿತ್ತು ಆದರೆ ವಿಷಯ ಇಟ್ಟಿಲ್ಲ ಎಂದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಅವರು ಸಚಿವರಿಗಾಗಲಿ / ಸರ್ಕಾರಕ್ಕಾಗಲಿ ಉತ್ತರ ಕೊಟ್ಟುಕೊಳ್ಳಲಿ ನಮಗೆ ಸಿಂಡಿಕೇಟ್ ನಿರ್ಣಯಕ್ಕೆ ವಿರುದ್ಧವಾಗಿ ತೆಗೆದುಕೊಂಡಿರುವ ನಿರ್ಣಯದ ಕುರಿತು ಸಭೆಯಲ್ಲಿ ಉತ್ತರ ನೀಡಬೇಕು ಎಂದರು. ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪ ಮತ್ತು ಶ್ರೀ ಸಂತೋಷ್ ಬಳ್ಳೆಕೆರೆಯವರು ಸಹ ಉತ್ತರ ನೀಡುವಂತೆ ಒತ್ತಾಯಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ನಾನು ಸಾಂಧರ್ಬಿಕ ಕೂಸು, ನನ್ನ ಅಸಹಾಯಕತೆಯಿಂದಾಗಿ ನಿರ್ಧಾರ ತೆಗೆದುಕೊಳ್ಳಬೇಕಾಯಿತು ಎಂದರು.

ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥರವರು ಮಾತನಾಡಿ ಆ ರೀತಿ ಆಗಿದ್ದರೆ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಿ ನಿರ್ಣಯ ತೆಗೆದುಕೊಳ್ಳುವುದಾಗಿ ಮುಷ್ಕರ ನಿರತ ವಿದ್ಯಾರ್ಥಿಗಳಿಗೆ ತಿಳಿಸಬೇಕಾಗಿತ್ತು ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ನೀವು ರಾಜ್ಯಪಾಲರ ಹತ್ತಿರ ಹೋಗಿದ್ದಿರಲ್ಲ ನನಗೆ ಹೇಳಿದ್ದಿರಾ ಎಂದು ಕೇಳಿದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ನಿಮ್ಮ ನಿರ್ಣಯದಿಂದ ಸಿಂಡಿಕೇಟಿಗೆ ಅಪಮಾನವಾದಂತಾಗಿದೆ ಎಂದರು.

ಮಾನ್ಯ ಕುಲಪತಿಗಳು ಪುನ: ಮಾತನಾಡಿ ನಾನು ಈಗಾಗಲೇ ಎಲ್ಲರಿಗೂ ತಿಳಿಸಿದಂತೆ, ನಾನು ಘನತೆವೆತ್ತ ರಾಜ್ಯಪಾಲರು / ಮುಖ್ಯ ಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಸಚಿವರಿಗೆ ಉತ್ತರ ಕೊಡುತ್ತೇನೆ ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಈ ಹಿಂದೆ ಒಂದು ಪ್ರಕರಣದಲ್ಲಿ ನಿರ್ಣಯ ತೆಗೆದುಕೊಂಡು ಸಿಂಡಿಕೇಟ್ ಸಭೆಗೆ ಮಂಡಿಸದೇ ಇದ್ದು ವಿಚಾರಣೆಗಾಗಿ ಘನತೆವೆತ್ತ ರಾಜ್ಯಪಾಲರ ಕಛೇರಿಗೆ ಬಂದಾಗ ಅಲ್ಲೂ ಅನುಮೋದನೆ ಆಯಿತು. ಆದರೆ ನಂತರ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಫೀಲು ವಿಚಾರಣೆಗೆ ಬಂದಾಗ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿಲ್ಲ ಎಂಬ ಕಾರಣಕ್ಕಾಗಿ ಪ್ರಕರಣಕ್ಕೆ ಹಿನ್ನೆಡೆಯಾಯಿತು. ಕಂಡಿಕೆ 15 ಉಪಕಂಡಿಕೆ(5)ರನ್ವಯ ಯಾವುದೇ ನಿರ್ಣಯ ತೆಗೆದುಕೊಂಡರೂ ಅದನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಸ್ಥಿರೀಕರಣ ಪಡೆಯಬೇಕು ಎಂದರು. ಕುಲಸಚಿವ(ಪರೀಕ್ಷಾಂಗ)ರವರು ಇದಕ್ಕೆ ಧ್ವನಿಗೂಡಿಸಿದರು.

ಕುಲಸಚಿವರು ಮಾತನಾಡಿ ಕಂಡಿಕೆ 15 ಉಪಕಂಡಿಕೆ(5)ರನ್ವಯ ನಿರ್ಣಯ ತೆಗೆದುಕೊಂಡ ಮೇಲೆ ಸಿಂಡಿಕೇಟ್ ಸಭೆಗೆ ಮಂಡಿಸಬೇಕಾಗಿರುತ್ತದೆ ಎಂದು ಹೇಳಿದರು. ಮುಂದುವರೆದು ಮಾತನಾಡಿ ದಿನಪತ್ರಿಕೆಗಳು ಹಾಗೂ ಮಾಧ್ಯಮಗಳಲ್ಲಿ ಪ್ರತಿದಿನ ವಿಶ್ವವಿದ್ಯಾಲಯದ ನಡೆ ಬಗ್ಗೆ ವರದಿ ಪ್ರಕಟವಾಗುತ್ತಿದ್ದು ವಿಶ್ವವಿದ್ಯಾಲಯದ ಕಾರ್ಯ ವೈಖರಿಯ ಕುರಿತು ಗೊಂದಲಗಳು ನಿರ್ಮಾಣವಾದ ಹಿನ್ನೆಲೆಯಲ್ಲಿ ತಕ್ಷಣ ದೂರಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾಗಿದ್ದ ಪ್ರೊ. ಎಸ್. ಎನ್. ಯೋಗೀಶ್, ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗ ಇವರನ್ನು ಸದರಿ ಹುದ್ದೆಯಿಂದ ಬಿಡುಗಡೆಗೊಳಿಸಿ ಪ್ರೊ. ಬಿ.ಎಸ್. ಬಿರಾದಾರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಇವರನ್ನು ನೇಮಿಸಲಾಗಿದೆ. ಪ್ರೊ. ಬಿ.ಎಸ್. ಬಿರಾದಾರ್ ಇವರನ್ನು ನೇಮಕ ಮಾಡಿರುವುದಕ್ಕೆ ಸರ್ಕಾರವೂ ಕೂಡ ಅನುಮೋದನೆ ನೀಡಿದೆ ಹಾಗೂ ಕಲಿಕಾರ್ಥಿ ಸೇವಾ ಕೇಂದ್ರಗಳು ವಿಶ್ವವಿದ್ಯಾಲಯಕ್ಕೆ ಪಾವತಿಸಿರುವ ಶುಲ್ಕ, ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ, ಹಾಗೂ ಬಾಕಿ ಇರುವ ಶುಲ್ಕ ಇವುಗಳ ಬಗ್ಗೆ ಪರಿಶೀಲಿಸಿ ವರದಿ ನೀಡಲು ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕರುಗಳನ್ನೊಳಗೊಂಡ ಒಂದು ಸಮಿತಿ ಹಾಗೂ ಕಲಿಕಾರ್ಥಿ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಲು ಹಿರಿಯ ಪ್ರಾಧ್ಯಾಪಕರುಗಳು ಮತ್ತು ಸಿಂಡಿಕೇಟ್ ಸದಸ್ಯರುಗಳನ್ನೊಳಗೊಂಡ ಮೂರು ಸಮಿತಿಗಳನ್ನು ರಚಿಸಿರುವುದನ್ನು ಸಭೆಯ ಗಮನಕ್ಕೆ ತಂದರು. ಇದಕ್ಕೆ ಎಲ್ಲಾ ಸಿಂಡಕೇಟ್ ಸದಸ್ಯರು ಒಪ್ಪಿಗೆ ನೀಡಿದರು, ಮಾನ್ಯ ಕುಲಪತಿಗಳು ಇದನ್ನು ಅನುಮೋದಿಸಿದರು. ಎಲ್ಲಾ ಸಮಿತಿಗಳನ್ನು ರಚಿಸಿರುವುದಕ್ಕೆ ಸಭೆಯು ಅನುಮೋದನೆ ನೀಡಿತು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಚರ್ಚಿಸಲು ಎಷ್ಟೊಂದು ವಿಷಯ ಇದೆ ವಿಶ್ವವಿದ್ಯಾಲಯವು ಪ್ರತಿ ತಿಂಗಳು ಸಭೆ ಕರೆಯಬೇಕು. ಆದ ನಿರ್ಣಯಗಳು ಜಾರಿಗೆ ಬರೋದಿಲ್ಲ. ನಮ್ಮ ಸದಸ್ಯತ್ವ ಇನ್ನು ಸ್ವಲ್ಪ ಸಮಯ ಇದೆ ವಿಶ್ವವಿದ್ಯಾಲಯದ ಅಭಿವೃದ್ಧಿಯ ಬಗ್ಗೆ ಯೋಚನೆ ಮಾಡೋಣ ಎಂದರು.

ಈ ವಿಷಯ ಇನ್ನೂ ಚರ್ಚೆಯಾಗಬೇಕಾಗಿರುವುದರಿಂದ ಈಗ ಬೇರೆ ವಿಷಯಗಳನ್ನು ತೆಗೆದುಕೊಂಡು ಇದನ್ನು ನಂತರ ಚರ್ಚಿಸೋಣ ಎಂದು ಎಲ್ಲ ಸದಸ್ಯರು ಕೋರಿದ್ದರಿಂದ ಅದರಂತೆ ತೀರ್ಮಾನಿಸಲಾಯಿತು.

**ದಿನಾಂಕ:01-02-2022 ರ ವಿಶೇಷ ಸಿಂಡಿಕೇಟ್ ಸಭೆಯ ವಿಷಯಗಳು :**

**ಪ್ರಾಧಿಕಾರಗಳ ವಿಭಾಗ**

**2022-ಸಿಂ-1.01 :** 2020-21 ನೇ ಆರ್ಥಿಕ ಸಾಲಿನ 33ನೇ ವಾರ್ಷಿಕ ವರದಿಯನ್ನು ಅನುಮೋದಿಸುವ ಕುರಿತು.

**ಚರ್ಚೆ :** ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ 2020-21ನೇ ಸಾಲಿನ ವಾರ್ಷಿಕ ವರದಿ ಸಿದ್ಧತೆ ಕುರಿತು ವಿವರಿಸಿದರು. ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮುದ್ರಿಸಿ ಸರ್ಕಾರಕ್ಕೆ ಕಳುಹಿಸಬೇಕಾಗಿದ್ದು ಅನುಮೋದನೆಗಾಗಿ ಮಂಡಿಸಿದೆ ಎಂದರು. ಸದಸ್ಯರಾದ ಶ್ರೀ ರಮೇಶ್‌ಬಾಬು ರವರು ಮಾತನಾಡಿ ಇದರಲ್ಲಿ ಆರ್ಥಿಕ ವಿಷಯ ಸೇರಿಲ್ಲವೇ ಎಂದರು. ಕುಲಸಚಿವರು ವಾರ್ಷಿಕ ವರದಿ ಶೈಕ್ಷಣಿಕ ವಿಷಯಗಳನ್ನು ಮಾತ್ರ ಒಳಗೊಂಡಿರುತ್ತದೆ ಎಂದು ಸ್ಪಷ್ಟಪಡಿಸಿದರು. ಇದಕ್ಕೆ ಸಭೆಯು ಒಪ್ಪಿತು.

**ನಿರ್ಣಯ:** ಚರ್ಚೆಯ ನಂತರ 2020-21 ನೇ ಆರ್ಥಿಕ ಸಾಲಿನ 33ನೇ ವಾರ್ಷಿಕ ವರದಿಯನ್ನು ಅನುಮೋದಿಸಲಾಯಿತು.

**2022–ಸಿಂ–1.02** : ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ಮಂಡಳಿಯ ರಚನೆಯನ್ನು ಸ್ಥಿರೀಕರಿಸುವ ಕುರಿತು.

ಚರ್ಚೆ : ಕುಲಸಚಿವರು ವಿಷಯ ಮಂಡಿಸಿದರು. ಈ ಕುರಿತು ಮಾತನಾಡಿದ ಸದಸ್ಯರಾದ ಪ್ರೊ. ವಿ. ಕೃಷ್ಣರವರು ಸ್ನಾತಕೋತ್ತರ ಆಹಾರ ತಂತ್ರಜ್ಞಾನ ವಿಷಯದ ಪರಿನಿಯಮ ರಚನೆ ಆಗಬೇಕು. ಪರಿನಿಯಮ ಇಲ್ಲದೇ ಕೋರ್ಸ್ ಮಾಡಿದರೆ ಮುಂದೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದರು. ಸದಸ್ಯರಾದ ಶ್ರೀ ಧರ್ಮಪ್ರಸಾದ್ ರವರು ಮಾತನಾಡಿ ಹಿಂದಿನ ಸಭೆಯಲ್ಲಿ ಪರಿನಿಯಮ ರಚನೆ ಮಾಡಿ ಕೂಡಲೇ ಸರ್ಕಾರಕ್ಕೆ ಕಳುಹಿಸಿ ಸರ್ಕಾರದ ಮಟ್ಟದಲ್ಲಿ ಪರಿನಿಯಮದ ಅನುಮೋದನೆಗೆ ಪ್ರಯತ್ನ ಮಾಡಬೇಕೆಂದು ತಿಳಿಸಿದ್ದೆವು. ಆದರೆ ಅದು ಆಗಿಲ್ಲ ಎಂದರು. ಸದಸ್ಯರಾದ ಪ್ರೊ. ವಿ. ಕೃಷ್ಣರವರು ಮಾತನಾಡಿ ವಿಶ್ವವಿದ್ಯಾಲಯವು ಜಾಹಿರಾತು ನೀಡಿದ್ದರಿಂದ 40 ವಿದ್ಯಾರ್ಥಿಗಳು ಸದರಿ ಕೋರ್ಸಿಗೆ ಪ್ರವೇಶ ಪಡೆದಿದ್ದಾರೆ ಎಂದರು. ಕುಲಸಚಿವ ಪರೀಕ್ಷಾಂಗರವರು ಮಾತನಾಡಿ ವಿಶ್ವವಿದ್ಯಾಲಯದ ಅಭಿವೃದ್ಧಿಯ ದೃಷ್ಟಿಯಿಂದ ಪ್ರತಿ ವರ್ಷ ಹೊಸ ಹೊಸ ಕೋರ್ಸುಗಳನ್ನು ಪ್ರಾರಂಭ ಮಾಡಬೇಕಾಗುತ್ತದೆ ಹಾಗಾಗಿ ಮಾಡಲಾಗಿದೆ ಎಂದರು. ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡಿ ತಕ್ಷಣ ಪರಿನಿಯಮ ಸಿದ್ದಪಡಿಸಿ ಸರ್ಕಾರದ ಅನುಮೋದನೆಗೆ ಕಳುಹಿಸಿಕೊಡಬೇಕು ಎಂದರು. ಸದಸ್ಯರಾದ ಪ್ರೊ. ವಿ. ಕೃಷ್ಣರವರು ಮಾತನಾಡಿ ಸಂಬಂಧಪಟ್ಟ ವಿಭಾಗದಿಂದ ಪರಿನಿಯಮ ಕಳುಹಿಸಿಕೊಟ್ಟಲ್ಲಿ ತಕ್ಷಣ ಕ್ರಮ ಕೈಗೊಳ್ಳುತ್ತೇವೆ ಎಂದರು. ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾಲಯದ ಶೈಕ್ಷಣಿಕ ಅಭಿವೃದ್ಧಿಯ ದೃಷ್ಟಿಯಿಂದ ಹೊಸ ಹೊಸ ಕೋರ್ಸುಗಳನ್ನು ಮಾಡಬೇಕೆಂದು ಪ್ರತಿಬಾರಿ ಹೇಳುತಿದ್ದೇನೆ ಎಂದರು. ಸದಸ್ಯರಾದ ಪ್ರೊ. ರಮೇಶ್ ಹೆಚ್. ಎನ್. ಇವರು ಮಾತನಾಡಿ ಪರಿನಿಯಮ ಅನುಮೋದನೆಯಾಗದ ಕೋರ್ಸುಗಳು ಇನ್ನೂ ಇವೆ. ಪ್ರೊ. ಕೃಷ್ಣರವರು ಮಾತನಾಡಿ ಎಲ್ಲ ಕೋರ್ಸುಗಳ ಪರಿನಿಯಮಗಳನ್ನು ಅನುಮೋದನೆಗೆ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಯಾವ ಯಾವ ಪರಿನಿಯಮ ಅನುಮೋದನೆ ಆಗಿಲ್ಲವೋ ಅವುಗಳನ್ನು ಬೇಗ ಮಾಡಿಸಿ ಎಂದು ಸದಸ್ಯರಾದ ಶ್ರೀ ಧರ್ಮಪ್ರಸಾದ್ ಇವರು ಆಗ್ರಹಿಸಿದರು. ಕುಲಸಚಿವರು ಮಾತನಾಡಿ ವಿಭಾಗಾಧ್ಯಕ್ಷರಿಂದ ಪರಿನಿಯಮ ಏಕೆ ಮಾಡಿಲ್ಲ ಎಂದು ವಿಚಾರಿಸುವುದಾಗಿ ತಿಳಿಸಿದರು. ಹಾಗೂ ಯಾವ ಯಾವ ಪರಿನಿಯಮ ಅನುಮೋದನೆ ಆಗಿಲ್ಲ ಎಂಬ ಬಗ್ಗೆ ಮಾಹಿತಿ ಪಡೆದು ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ಮಂಡಳಿಯ ರಚನೆಯನ್ನು ಸ್ಥಿರೀಕರಿಸಲಾಯಿತು. ಹಾಗೂ ಪರಿನಿಯಮವನ್ನು ಆದಷ್ಟು ಶೀಘ್ರವಾಗಿ ಸರ್ಕಾರಕ್ಕೆ ಕಳುಹಿಸಿ ಅನುಮೋದನೆ ಪಡೆಯಲು ಕ್ರಮಕೈಗೊಳ್ಳುವಂತೆ ನಿರ್ಣಯಿಸಲಾಯಿತು.

**2022–ಸಿಂ–1.02(ಎ)**: ದಿನಾಂಕ:27–10–2021ರ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ಕರಡು ನಡಾವಳಿಯ ಅನುಮೋದನೆ.

ಚರ್ಚೆ : **2021–ಸಿಂ3.14(ಎ)**: ವಿಷಯದ ಕುರಿತು ಸದಸ್ಯರಾದ ಶ್ರೀ. ಧರ್ಮಪ್ರಸಾದ್ ಇವರು ಪ್ರಸ್ತಾಪಿಸಿದ ಪ್ರಸಿದ್ಧ ಸಮಾಜ ಸೇವಕರಾದ ನಾ. ಕೃಷ್ಣ ರವರ ಅಧ್ಯಯನ ಪೀಠವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಕುರಿತ ಹೇಳಿಕೆಗೆ ಪೂರಕವಾಗಿ ಅವರ ಬಗ್ಗೆ ಮಾಹಿತಿ ಕೊರತೆ ಇದೆ ಎಂದು ಸದಸ್ಯರಾದ ಪ್ರೊ. ವಿ ಕೃಷ್ಣರವರು ಹೇಳಿಕೆ ನೀಡಿದ ಹಿನ್ನಲೆಯಲ್ಲಿ ಸದಸ್ಯರಾದ ಶ್ರೀ. ಧರ್ಮಪ್ರಸಾದ್ ಇವರು ಮಾತನಾಡಿ ಪ್ರಸಿದ್ಧ ಸಮಾಜ ಸೇವಕರಾದ ನಾ. ಕೃಷ್ಣ ಇವರು ಆರೋಗ್ಯ ಕ್ಷೇತ್ರದ ವಿಸ್ಮಯ, ರಕ್ತದ ಕ್ಯಾನ್ಸರ್ ಹೊಂದಿದ್ದ ಇವರು ಮೃತ್ಯುವನ್ನು ಗೆದ್ದ ಮೃತ್ಯುಂಜಯ ಎಂದರು. ಪ್ರೊ. ವಿ ಕೃಷ್ಣರವರು ಮಾತನಾಡಿ **ಪೂರಕ ಮಾಹಿತಿ ಕೊಟ್ಟಲ್ಲಿ ನಾ. ಕೃಷ್ಣ ಅಧ್ಯಯನ ಪೀಠ ಸ್ಥಾಪಿಸಲು ಪರಿಶೀಲಿಸಲಾಗುವುದು** ಎಂದರು ಇದನ್ನು ನಿರ್ಣಯದಲ್ಲಿ ಸೇರ್ಪಡೆಗೊಳಿಸಲು ತೀರ್ಮಾನಿಸಲಾಯಿತು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡಿ ದಿನಾಂಕ:27–10–2021ರ ಸಿಂಡಿಕೇಟ್ ಸಭೆಯ ರೆಕಾರ್ಡಿಂಗ್ ಆಗಿರುವುದರಿಂದ ರೆಕಾರ್ಡ್‌ರ್‌ನ್ನು ಮತ್ತೊಮ್ಮೆ ಪರಿಶೀಲಿಸಿ ನಡಾವಳಿಯಲ್ಲಿ ನಮೂದಿಸುವಂತೆ ಕೋರಿದರು.

**2021–ಸಿಂ–3.17(ಇ):** ಈ ವಿಷಯದ ಕುರಿತು ಈ ಯೋಜನೆಯನ್ನು ವಿಶ್ವವಿದ್ಯಾಲಯದ ಪ್ರತಿ ವಿಭಾಗಗಳಿಂದ ಅಲ್ಯುಮಿನಿ ಡಾಟಾ ಕಲೆಕ್ಟ್ ಮಾಡಿ ವಿಶ್ವವಿದ್ಯಾಲಯದ ಮಟ್ಟದಲ್ಲಿಯೇ ಮುಂದಿನ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು ಹಾಗೂ Design Development Implementation & Maintainance of Fraternity Platform Infrastructure (FPI)ನ್ನು ಜಾರಿಗೆ ತರುವ ಬಗ್ಗೆ ಯಾವುದೇ ನಿರ್ಣಯ ಆಗಿರಲಿಲ್ಲ. ಆದರೆ ನಿರ್ಣಯದಲ್ಲಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು ಎಂದು ನಮೂದಾಗಿದೆ, ಇದು ತಪ್ಪು ಈ ವಿಷಯದ ಕುರಿತು ನನ್ನ ತೀವ್ರ ವಿರೋಧವಿದೆ ಎಂದು ಸದಸ್ಯರಾದ ಶ್ರೀಮತಿ ಕಿರಣ ರವೀಂದ್ರ ದೇಸಾಯಿಯವರು ತಿಳಿಸಿದರು. ಇದಕ್ಕೆ ಶ್ರೀ ಜಿ. ಧರ್ಮಪ್ರಸಾದ್ ಹಾಗೂ ಶ್ರೀ ಹೆಚ್. ರಾಮಲಿಂಗಪ್ಪರವರು ಸಹಮತ ವ್ಯಕ್ತಪಡಿಸಿದರು.

ಕುಲಸಚಿವರು ಮಾತನಾಡಿ ರೆಕಾರ್ಡ್‌ರ್ ಪರಿಶೀಲಿಸಿ ನಡಾವಳಿ ಸಿದ್ದಪಡಿಸಿ ಅನುಮೋದನೆಗಾಗಿ ಮಾನ್ಯಕುಲಪತಿಗಳಿಗೆ ಸಲ್ಲಿಸಲಾಗಿತ್ತು. ಮಾನ್ಯ ಕುಲಪತಿಗಳು ತಿದ್ದುಪಡಿ ಮಾಡಿ ಸಭೆಯಲ್ಲಿ ಇದರ ಕುರಿತು ವಿವರಿಸುತ್ತೇನೆ ಎಂದು ತಿಳಿಸಿದ್ದರಿಂದ ಅದರಂತೆ ಕಡತದ ಟಿಪ್ಪಣಿಯಲ್ಲಿ ನಮೂದಿಸಲಾಗಿದೆ ಎಂದರು

ಸದಸ್ಯರಾದ ಶ್ರೀ ರಾಮಲಿಂಗಪ್ಪರವರು ಮಾತನಾಡಿ ಸಿಂಡಿಕೇಟ್ ನಿರ್ಣಯ ತಿದ್ದುಪಡಿ ಮಾಡಲು ಕುಲಪತಿಗಳಿಗೆ ಅಧಿಕಾರ ನೀಡಿಲ್ಲ ಎಂದರು. ಸದಸ್ಯರಾದ ಶ್ರೀ ರಮೇಶ್ ಬಾಬುರವರು ಸಹ ನಿರ್ಣಯ ಹಾಗೆ ಆಗಿಲ್ಲ ಎಂದರು. ಇದಕ್ಕೆ ನನ್ನ ಸಹಮತ ಇಲ್ಲ ಎಂದು ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಪುನರುಚ್ಚರಿಸಿದರು. ಶ್ರೀ ಸಂತೋಷ್ ಬಳ್ಳೇಕೆರೆಯವರು ಸಹ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು ಎಂದು ನಿರ್ಣಯ ಆಗಿಲ್ಲ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ನಾನು ಹಾಗೆ ಹೇಳಿಲ್ಲ, ಷರತ್ತು ಮಾರ್ಪಡಿಸಲು ಕುಲಪತಿಗಳಿಗೆ ಅಧಿಕಾರ ನೀಡಲ್ಲಾಯಿತು ಎಂದು ಮಾರ್ಪಡಿಸಲಾಗಿದೆ ಎಂದರು.

ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಈ ಯೋಜನೆಯೇ ಬೇಡ ಎಂದರು. ಸದಸ್ಯರಾದ ಶ್ರೀ ಧರ್ಮಪ್ರಸಾದ್ ಮಾತನಾಡಿ ಸಭೆಯಲ್ಲಿ ಏನು ನಿರ್ಣಯವಾಗಿತ್ತೋ ಅದನ್ನು ನಮೂದಿಸಿ ಎಂದರು. ಅಂತಿಮವಾಗಿ ವಿವರಗಳೊಂದಿಗೆ ಕೂಲಂಕಷ ಚರ್ಚೆಗಾಗಿ ಮುಂದಿನ ಸಭೆಗೆ ಮಂಡಿಸಲು ತಿಳಿಸಿ ಮುಂದೂಡಲಾಯಿತು ಎಂದು ನಡಾವಳಿಯಲ್ಲಿ ತಿದ್ದುಪಡಿ ಮಾಡಲು ನಿರ್ಣಯಿಸಲಾಯಿತು.

**2021–ಸಿಂ–5.18(ಎ):** M/s KEONICS Bangalore ಇವರ ಮೂಲಕ ವಿಶ್ವವಿದ್ಯಾಲಯದಲ್ಲಿ EDGS ಜಾರಿಗೊಳಿಸುವ ವಿಷಯದ ಕುರಿತ ನಿರ್ಣಯದಲ್ಲಿ **MOU Terms and Conditions ಹಾಗೂ ಮುಂದಿನ ಆಗು ಹೋಗುಗಳಿಗೆ ಕುಲಪತಿಯವರಿಗೆ ಅಧಿಕಾರ ನೀಡಲು ನಿರ್ಧರಿಸಲಾಯಿತು** ಎಂಬದನ್ನು ರದ್ದುಪಡಿಸಿ **ಒಮ್ಮತವಾದ ನಿರ್ಣಯಕ್ಕೆ ಬರಲು ಸಾಧ್ಯವಾಗದ ಕಾರಣ ವಿಷಯವನ್ನು ಮುಂದೂಡಲಾಯಿತು.** ಎಂದು ತಿದ್ದುಪಡಿ ಮಾಡಲು ನಿರ್ಣಯಿಸಲಾಯಿತು.

**2021–ಸಿಂ–5.10 :** ಸದಸ್ಯರಾದ ಪ್ರೊ ವಿ. ಕೃಷ್ಣರವರು ಮಾತನಾಡಿ "DRAFT STATUTE GOVERNING THE ESTABLISHMENT OF PROFESSOR B. KRISHNAPPA STUDY CHAIR AT KUVEMPU UNIVERSITY ಪರಿನಿಯಮದ ಅನುಮೋದನೆ ಕುರಿತು." ಈ ವಿಷಯವು ನಡಾವಳಿಗಳಲ್ಲಿ DRAFT STATUTE GOVERNING THE ESTABLISHMENT ಎಂದಷ್ಟೇ ನಮೂದಾಗಿರುವುದರಿಂದ ಪೂರ್ಣ ವಿಷಯ ನಮೂದಿಸಲು

ಕೋರಿದರು ಅದರಂತೆ ನಡಾವಳಿಗಳಲ್ಲಿ ಸರಿಪಡಿಸಲು ನಿರ್ಣಯಿಸಲಾಯಿತು. ಉಳಿದಂತೆ ನಿರ್ಣಯದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**2021–ಸಿಂ–5.19(ಸಿ):** ವೃತ್ತಿ ಪದೋನ್ನತಿ ಹೊಂದಿದ ಅಧ್ಯಾಪಕರಿಗೆ ಅವರ ಅರ್ಹತಾ ದಿನಾಂಕದಿಂದಲೇ ಆರ್ಥಿಕ ಸೌಲಭ್ಯ ನೀಡಲು ನಿರ್ಣಯಿಸಲಾಯಿತು ಎಂದು ನಡಾವಳಿಯ ನಿರ್ಣಯದಲ್ಲಿ ಸೇರ್ಪಡಿಸಬೇಕು ಎಂದು ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಕೋರಿದರು.

ಕುಲಸಚಿವರು ಮಾತನಾಡಿ 2019ರಲ್ಲಿ ಪರಿನಿಯಮ ಅನುಮೋದನೆ ಆಗಿರುವುದರಿಂದ ಆ ದಿನಾಂಕದಿಂದ ಆರ್ಥಿಕ ಸೌಲಭ್ಯ ನೀಡಲು ನಿರ್ಣಯಿಸಲಾಗಿದೆ ಎಂದರು. ಅರ್ಹತಾ ದಿನಾಂಕದಿಂದ ಆರ್ಥಿಕ ಸೌಲಭ್ಯ ನೀಡುವ ಕುರಿತಂತೆ ಈಗಾಗಲೇ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪರವರು ಮಾತನಾಡಿ ಸರ್ಕಾರದ ಆದೇಶವಿದ್ದರೂ ಮತ್ತೆ ಏಕೆ ಸರ್ಕಾರಕ್ಕೆ ಬರೆಯಬೇಕು ಎಂದರು.

ಸದಸ್ಯರಾದ ಪ್ರೊ. ವಿ ಕೃಷ್ಣರವರು ಮಾತನಾಡಿ ಅಧ್ಯಾಪಕ ಸಂಘದಿಂದಲೂ ಮನವಿ ಕೊಟ್ಟಿದ್ದೇವೆ ಎಂದರು.

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪರವರು ಮಾತನಾಡಿ ಮೈಸೂರು ವಿಶ್ವವಿದ್ಯಾಲಯದಲ್ಲಿ 2018–19, 2019–20ರಲ್ಲಿ ಅರ್ಹತೆ ಪಡೆದವರಿಗೆ ಅರ್ಹತಾ ದಿನಾಂಕದಿಂದಲೇ ಆರ್ಥಿಕ ಸೌಲಭ್ಯ ಪಾವತಿಸಲಾಗಿದೆ ಆದರೆ ನಮ್ಮ ವಿಶ್ವವಿದ್ಯಾಲಯದಲ್ಲಿ ಏಕೆ ಕೊಡುತ್ತಿಲ್ಲ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ಮೈಸೂರು ಹಾಗೂ ಧಾರವಾಡ ವಿಶ್ವವಿದ್ಯಾಲಯಗಳಲ್ಲಿ ಅರ್ಹತಾ ದಿನಾಂಕದಿಂಧ ಆರ್ಥಿಕ ಸೌಲಭ್ಯ ನೀಡಿದ್ದಾರೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಯು.ಜಿ.ಸಿ. ಯಿಂದ ನವಂಬರ್ 2014ರಲ್ಲಿ ಒಂದು ಪತ್ರ ಬಂದಿದೆ ಅದರಲ್ಲಿ ವೃತ್ತಿ ಪದೋನ್ನತಿ ಆರ್ಥಿಕ ಸೌಲಭ್ಯವನ್ನು ಅರ್ಹತಾ ದಿನಾಂಕದಿಂದಲೇ ನೀಡಬೇಕೆಂದು ಹೇಳಿದೆ ಎಂದರು. ಅಲ್ಲದೇ ವಿಶ್ವವಿದ್ಯಾಲಯವು ಪ್ರಸ್ತುತ ವೃತ್ತಿ ಪದೋನ್ನತಿ ಸಭೆ ನಡೆಸುವ ಬಗ್ಗೆ, ಆದೇಶ ನೀಡುವ ಬಗ್ಗೆ, ಬಹಳಷ್ಟು ಕೆಟ್ಟದಾಗಿ ಸಾರ್ವಜನಿಕ ಸ್ಥಳಗಳಲ್ಲಿ ಮಾತನಾಡಿಕೊಳ್ಳುತಿದ್ದಾರೆ ತಲೆ ತಗ್ಗಿಸೋ ಸ್ಥಿತಿ ಬಂದಿದೆ ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಐ.ಕ್ಯೂ.ಎ.ಸಿ. ಯಿಂದ ಪಟ್ಟಿ ನೀಡುವವರಿಗೆ ವೃತ್ತಿ ಪದೋನ್ನತಿ ನಡೆಸಲಾಗಿದೆ. ಯುಜಿಸಿ ಪ್ರಕಾರ ಅರ್ಹತೆ ಇಲ್ಲದವರಿಗೆ ವಿಳಂಬ ಆಗಿದೆ ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ನಾವು ನಿಯಮಗಳ ಕುರಿತು ಹೇಳುತ್ತಿಲ್ಲ. ವೃತ್ತಿ ಪದೋನ್ನತಿಗೆ ಅರ್ಹರಿರುವ ಅಧ್ಯಾಪಕರಿಗೆ ವೃತ್ತಿ ಪದೋನ್ನತಿಯ ನೇಮಕಾತಿ ಮಂಡಳಿ ರಚಿಸಿ ಶೀಘ್ರವಾಗಿ ಕ್ರಮಕೈಗೊಳ್ಳಿ ಎಂದರು ಹಾಗೂ ವೃತ್ತಿ ಪದೋನ್ನತಿಯ ಅರ್ಹತಾ ದಿನಾಂಕದಿಂದ ಆರ್ಥಿಕ ಸೌಲಭ್ಯ ನೀಡುವುದು ಎಂದು ನಿರ್ಣಯದಲ್ಲಿ ಸೇರ್ಪಡಿಸಬೇಕು ಎಂದು ಒತ್ತಾಯಿಸಿದರು.

ಕುಲಸಚಿವರು ಮಾತನಾಡಿ "ಸರ್ಕಾರದೊಂದಿಗೆ ಈಗಾಗಲೇ ಪತ್ರ ವ್ಯವಹರಿಸಿದ್ದು, ಇನ್ನೊಂದು ಬಾರಿ ಪ್ರಯತ್ನಿಸಿ ಕ್ರಮಕೈಗೊಳ್ಳಲಾಗುವುದು" ಎಂದರು. ಉಳಿದಂತೆ ನಿರ್ಣಯದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**2021–ಸಿಂ–5.22:** ಡಾ. ಗೀತಾ, ಪ್ರಾಧ್ಯಾಪಕರು, ಶಿಕ್ಷಣ ವಿಭಾಗ ಇವರನ್ನು ಶಿಕ್ಷಣ ನಿಕಾಯದ ಡೀನರಾಗಿ ನೇಮಕ ಮಾಡುವ ಕುರಿತು ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಳ್ಳಲು ನಿರ್ಣಯಿಸಲಾಗಿತ್ತು. ಆದರೆ

ನಿರ್ಣಯದಲ್ಲಿ ಡಾ. ಗೀತಾ, ಪ್ರಾಧ್ಯಾಪಕರು, ಶಿಕ್ಷಣ ವಿಭಾಗ ಇವರನ್ನು ನೇಮಕ ಮಾಡಲು ಒಕ್ಕೊರಲಿನಿಂದ ನಿರ್ಣಯಿಸಲಾಯಿತು ಎಂದು ನಮೂದಾಗಿದೆ ಎಂದು ಸದಸ್ಯರಾದ ಪ್ರೊ. ವಿ ಕೃಷ್ಣರವರು ಪ್ರಶ್ನಿಸಿದರು.

ಸದಸ್ಯರಾದ ಶ್ರೀ ಅಶೋಕ್ ಡಿ. ರೇವಣ್‌ಕರ್‌ರವರು ಮಾತನಾಡಿ ಈ ವಿಷಯದ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ಕಛೇರಿಗೂ ಈ ಬಗ್ಗೆ ದೂರು ಬಂದಿದೆ ಎಂದರು. ಸದಸ್ಯರಾದ ಶ್ರೀ ರಮೇಶಬಾಬು ರವರು ಮಾತನಾಡಿ ನಿಯಮಾನುಸಾರ ಮಾಡಿ ಎಂದು ನಿರ್ಣಯವಾಗಿರುತ್ತದೆ ಎಂದರು.

ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ವಿಭಾಗದಲ್ಲಿ ಲಭ್ಯವಿರುವ ಪ್ರಾಧ್ಯಾಪಕರ ಪಟ್ಟಿಯನ್ನು ಪರಿಶೀಲಿಸಿ ನಿಯಮಾನುಸಾರ ಮಾಡಿ ಎಂದು ನಿರ್ಣಯ ಕೈಗೊಳ್ಳಲಾಗಿತ್ತು ಎಂದರು.

ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ ಡಾ. ಗೀತಾ, ಪ್ರಾಧ್ಯಾಪಕರು, ಶಿಕ್ಷಣ ವಿಭಾಗ ಇವರಿಗೆ ಈ ಹಿಂದೆ ಡೀನರ ಹುದ್ದೆ ನೀಡುವಾಗ ಸಹ ಪ್ರಾಧ್ಯಪಕರು ಎಂಬ ಕಾರಣಕ್ಕಾಗಿ ಪೂರ್ಣ ಅವಧಿಗೆ ನೀಡಿರುವುದಿಲ್ಲ ಈಗ ಸದರಿಯವರು ಪ್ರಾಧ್ಯಾಪಕರಾಗಿರುವುದರಿಂದ ಪ್ರಾಧ್ಯಾಪಕರ ಅನುಕ್ರಮಣ ಪಟ್ಟಿಯನ್ನು ಪರಿಶೀಲಿಸಿ ಡಾ. ಗೀತಾ ಇವರಿಗೆ ಡೀನರ ಹುದ್ದೆ ನೀಡಲಾಗಿದೆ ಎಂದರು.

ಮಾನ್ಯ ಕುಲಪತಿಗಳು ಮಾತನಾಡುತ್ತಾ ಪ್ರೊ. ವಿ. ಕೃಷ್ಣರವರೇ ಡಾ. ಗೀತಾರವರಿಗೆ ಅನ್ಯಾಯವಾಗಿರುತ್ತದೆ ಎಂದು ಹಿಂದಿನ ಸಭೆಯಲ್ಲಿ ತಿಳಿಸಿರುತ್ತಾರೆ ಎಂದು ಹೇಳಿದರು.

ಪ್ರೊ. ವಿ. ಕೃಷ್ಣರವರು ಮಾತನಾಡಿ ಹಿಂದಿನ ಕುಲಸಚಿವರ ಅವಧಿಯಲ್ಲಿ ಡಾ. ಗೀತಾರವರಿಗೆ ಡೀನರ ಜೇಷ್ಟತೆ ಮೇರೆಗೆ ಸಿಂಡಿಕೇಟ್ ಸದಸ್ಯತ್ವ ನೀಡುವುದರಲ್ಲಿ ಅನ್ಯಾಯವಾಗಿದೆ ಎಂಬುದು ನಿಜ. ಆದರೆ ಅದನ್ನು ಈಗ ಪರಿಗಣಿಸಿ ಇನ್ನೊಬ್ಬ ವ್ಯಕ್ತಿಗೆ ಅನ್ಯಾಯ ಮಾಡಬಾರದು ನಿಯಮಾನುಸಾರ ಅರ್ಹರಿದ್ದವರಿಗೆ ಕೊಡಬೇಕು ಎಂದರು.

ಸುಧೀರ್ಘ ಚರ್ಚೆಯ ನಂತರ ಸದರಿ ವಿಷಯದ ನಿರ್ಣಯದಲ್ಲಿನ **"ಎಲ್ಲಾ ಸಿಂಡಿಕೇಟ್ ಸದಸ್ಯರು ಡಾ. ಗೀತಾ ಸಿ, ಶಿಕ್ಷಣ ವಿಭಾಗ ಇವರನ್ನೇ ಶಿಕ್ಷಣ ನಿಕಾಯದ ಡೀನರನ್ನಾಗಿ ಮಾಡಬೇಕೆಂದು ಒಕ್ಕೊರಲಿನಿಂದ ಪ್ರತಿಪಾದಿಸಿದ್ದನ್ನು ಸಭೆಯು ಅನುಮೋದಿಸಿತು ಎನ್ನುವುದನ್ನು ರದ್ದುಪಡಿಸಿ "ನಿಯಮಾನುಸಾರ ಡೀನರ ನೇಮಕಾತಿ ಮಾಡಲು ನಿರ್ಣಯಿಸಲಾಯಿತು"** ಎಂದು ತಿದ್ದುಪಡಿ ಮಾಡಲು ಸಭೆಯು ತೀರ್ಮಾನಿಸಿತು. ಉಳಿದಂತೆ ನಿರ್ಣಯದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**2021–ಸಿಂ–5.19** (ಐ): ಕೆ.ಎಸ್.ಎಫ್–9, ಸಂಸ್ಥೆಯವರು ನೀಡಿದ ಉತ್ತರವನ್ನು ಪರಿಶೀಲಿಸಲು ರಚಿಸಿದ ಸಮಿತಿಗೆ ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರ ಹೆಸರನ್ನು ಸೇರಿಸಿ ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಯಿತು.

| | |
|---|---|
| ಶ್ರೀ ಜಿ. ಧರ್ಮಪ್ರಸಾದ್, ಸಿಂಡಿಕೇಟ್ ಸದಸ್ಯರು | – ಅಧ್ಯಕ್ಷರು |
| ಶ್ರೀ ನಿರಂಜನಮೂರ್ತಿ, ಸಿಂಡಿಕೇಟ್ ಸದಸ್ಯರು | – ಸದಸ್ಯರು |
| **ಶ್ರೀ ಸಂತೋಷ್ ಬಳ್ಳೇಕೆರೆ ಸಿಂಡಿಕೇಟ್ ಸದಸ್ಯರು** | **– ಸದಸ್ಯರು** |
| ಶ್ರೀ ಹೆಚ್. ರಾಮಲಿಂಗಪ್ಪ , ಸಿಂಡಿಕೇಟ್ ಸದಸ್ಯರು | – ಸದಸ್ಯರು |
| ಶ್ರೀ ಎಸ್.ಆರ್. ನಾಗರಾಜ, ಸಿಂಡಿಕೇಟ್ ಸದಸ್ಯರು | – ಸದಸ್ಯರು |
| ಶ್ರೀ ರಾಮಕೃಷ್ಣ , ಹಣಕಾಸು ಅಧಿಕಾರಿಗಳು | – ಸದಸ್ಯರು |
| ಉಪಕುಲಸಚಿವರು ಮಾ.ಸ.ನಿ ವಿಭಾಗ | – ಸಂಚಾಲಕರು. |

ಸದರಿ ಏಜೆನ್ಸಿಯವರಿಗೆ 2021ರ ಅಕ್ಟೋಬರ್ 31ರವರೆಗೆ ಮಾತ್ರ ವೇತನವನ್ನು ನೀಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಎನ್ನುವುದರ ಬದಲಿಗೆ, **"ಸಮಿತಿಯ ವರದಿ ಬರುವವರೆಗೆ**

**ಏಜೆನ್ಸಿ ನೌಕರರಿಗೆ ವೇತನ ಪಾವತಿಸಲು ಯಾವುದೇ ತೊಂದರೆ ಮಾಡಬಾರದು, ನಿಯಮಿತವಾಗಿ ಪ್ರತಿ ತಿಂಗಳು ಯಾವುದೇ ವಿಳಂಬವಿಲ್ಲದೇ ಪೂರ್ಣ ವೇತನ ಪಾವತಿ ಮಾಡಬೇಕು"** ಎಂದು ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಆಗ್ರಹಿಸಿದರು. ಅದರಂತೆ ನಿರ್ಣಯದಲ್ಲಿ ತಿದ್ದುಪಡಿ ಮಾಡಲು ನಿರ್ಣಯಿಸಲಾಯಿತು. ಹಾಗೂ ನಿರ್ಣಯದಲ್ಲಿ ನಮೂದಾಗಿರುವ ಸದರಿ **ಸಮಿತಿಯ ವರದಿಯನ್ನು ಆಧರಿಸಿ ಪುನ: ರೀ-ಟೆಂಡರ್ ಕರೆಯಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು** ಎಂಬ ವಾಕ್ಯವನ್ನು **ರದ್ದುಪಡಿಸಲು** ನಿರ್ಣಯಿಸಲಾಯಿತು ಉಳಿದಂತೆ ನಿರ್ಣಯದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**2022-ಸಿಂ-1.02(ಬಿ)** : ಸ್ನಾತಕ ಪದವಿ ಸೂಕ್ಷ್ಮಾಣುಜೀವಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ** : ಸುಧೀರ್ಘ ಚರ್ಚೆಯ ನಂತರ ಸ್ನಾತಕ ಪದವಿ ಸೂಕ್ಷ್ಮಾಣುಜೀವಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಲು ಕುಲಸಚಿವರಿಗೆ ಅಧಿಕಾರ ನೀಡಲಾಯಿತು.

**2022-ಸಿಂ-1.02(ಬಿ)** : ತಿದ್ದುಪಡಿಗೊಳಪಡಿಸಿರುವ ಪರಿನಿಯಮವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ.

**ನಿರ್ಣಯ** : ವಿಶ್ವವಿದ್ಯಾಲಯದ ಕಂಪ್ಯೂಟರ್‌ಪ್ರೋಗ್ರಾಮರ್ ಹುದ್ದೆಗೆ ಸಂಬಂಧಿಸಿದ ತಿದ್ದುಪಡಿ ಪರಿನಿಯಮವನ್ನು ಅನುಮೋದನೆಗಾಗಿ ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**2022-ಸಿಂ-1.02(ಸಿ)**: ಅತಿಥಿ ಉಪನ್ಯಾಸಕರ ಸೇವಾ ಭದ್ರತೆ ಮತ್ತು ಸಂಭಾವನೆ ಪರಿಷ್ಕರಣೆ ಕುರಿತಂತೆ ರಚಿಸಲಾದ ಸಮಿತಿಯ ಸಭೆಯ ನಡಾವಳಿ ಕುರಿತು.

**ಚರ್ಚೆ** : ಅತಿಥಿ ಉಪನ್ಯಾಸಕರ ಸೇವಾ ಭದ್ರತೆ ಮತ್ತು ಸಂಭಾವನೆ ಪರಿಷ್ಕರಣೆ ಕುರಿತಂತೆ ರಚಿಸಲಾದ ಸಮಿತಿಯ ಸದಸ್ಯರಾದ ಶ್ರೀ ಧರ್ಮ ಪ್ರಸಾದ್ ಜಿ. ರವರು ಮಾತನಾಡಿ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಅತಿಥಿ ಉಪನ್ಯಾಸಕರಿಗೆ ಸರ್ಕಾರದ ಆದೇಶದನ್ವಯ ಸಂಭಾವನೆಯನ್ನು ಪಾವತಿ ಮಾಡಲಾಗುತ್ತಿದೆ. ಆದರೆ ನಮ್ಮ ವಿಶ್ವವಿದ್ಯಾಲಯದಲ್ಲಿ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಈ ಕುರಿತು ಪರಿಶೀಲಿಸಿ ವರದಿ ನೀಡಲು ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ಎಲ್ಲಾ ಸಾಧಕ ಬಾಧಕಗಳನ್ನು ಪರಿಶೀಲಿಸಿ ವಿಶ್ವವಿದ್ಯಾಲಯಕ್ಕೆ ಅತಿಯಾದ ಹೊರೆಯಾಗದಂತೆ ಹಾಗೂ ಅತಿಥಿ ಉಪನ್ಯಾಸಕರಿಗೂ ಅನುಕೂಲವಾದ ಸಂಭಾವನೆಗಳನ್ನು ನಿಗದಿ ಮಾಡಲಾಗಿದ್ದು ಸಭೆಯ ಅವಗಾಹನೆಗೆ ಮಂಡಿಸಿದೆ ಎಂದರು.

ಸದಸ್ಯರಾದ ಪ್ರೊ. ವಿ. ಕೃಷ್ಣರವರು ಮಾತನಾಡಿ ಅತಿಥಿ ಉಪನ್ಯಾಸಕರಿಗೆ ನೀಡುವ ಸೌಲಭ್ಯಗಳನ್ನು ಆರ್‌ಟಿಎ ಗಳಿಗೂ ನೀಡುವಂತೆ ಕೋರಿದರು. ಇದಕ್ಕೆ ಎಲ್ಲಾ ಸದಸ್ಯರು ಸಹಮತ ವ್ಯಕ್ತಪಡಿಸಿದರು.

ಸದಸ್ಯರಾದ ಶ್ರೀ ಧರ್ಮ ಪ್ರಸಾದ್ ಜಿ. ರವರು ಮಾತನಾಡಿ ಮಾನ್ಯ ಕುಲಪತಿಗಳು ಸರ್ಕಾರದ ಆದೇಶವನ್ನು ಯಥಾವತ್ತಾಗಿ ಜಾರಿ ಮಾಡುವುದಾಗಿ ತಿಳಿಸಿದ್ದರು. ಇದರಿಂದ ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾಗುತ್ತಿತ್ತು. ಆದರೆ ಸಮಿತಿಯು ಅತಿಥಿ ಉಪನ್ಯಾಸಕರ ಸೇವಾವಧಿಯನ್ನು ಪರಿಗಣಿಸಿ ಸಂಭಾವನೆಯ ಸ್ಲ್ಯಾಬ್ ಮಾಡಿರುತ್ತದೆ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ನಾನು ಹಣಕಾಸು ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ ಅವರು ವಿಶ್ವವಿದ್ಯಾಲಯಕ್ಕೆ ಯಾವುದೇ ಹೆಚ್ಚುವರಿ ಅನುದಾನ ಲಭ್ಯವಾಗದೇ ಇರುವುದರಿಂದ ಸದ್ಯದ ಪರಿಸ್ಥಿತಿಯಲ್ಲಿ ಅತಿಥಿ ಉಪನ್ಯಾಸಕರ ವೇತನ ಹೆಚ್ಚು ಮಾಡುವುದು ಸಾಧ್ಯವಾಗುವುದಿಲ್ಲ ಎನ್ನುತಿದ್ದಾರೆ ಎಂದರು. ಅಲ್ಲದೇ ಅತಿಥಿ ಉಪನ್ಯಾಸಕರು 312 ಜನ ಹಾಗೂ ಆರ್.ಟಿ.ಎ. 13 ಜನ ಸೇರಿ ಒಟ್ಟು 325 ಜನ ಆಗುತ್ತಾರೆ. ಮಂಗಳೂರು ಮತ್ತು ಬೆಂಗಳೂರು

ವಿಶ್ವವಿದ್ಯಾಲಯಗಳಲ್ಲಿ ಅನುದಾನ ಇರುವುದರಿಂದ ಅವರಿಗೆ ತೊಂದರೆ ಇಲ್ಲ. ಅವರು ಸರ್ಕಾರದ ಆದೇಶವನ್ನು ಯಥಾವತ್ತಾಗಿ ಜಾರಿಗೆ ತಂದಿದ್ದಾರೆ. ಆದರೆ ನಮ್ಮ ವಿಶ್ವವಿದ್ಯಾಲಯದಲ್ಲಿ ಅನುದಾನದ ಕೊರತೆ ಇದೆ ಎಂದರು.

ಸದಸ್ಯರಾದ ಡಾ. ಧನಂಜಯ ಬಿ.ಜಿ. ರವರು ಮಾತನಾಡಿ ಸರ್ಕಾರಿ ಕಾಲೇಜುಗಳಲ್ಲಿ ಜಾರಿಗೆ ತಂದಿರುವುದರಿಂದ ವಿಶ್ವವಿದ್ಯಾಲಯದಲ್ಲಿ ಜಾರಿಗೆ ತರಲೇಬೇಕಾಗುತ್ತದೆ ಎಂದರು. ಸರ್ಕಾರ ಅತಿಥಿ ಉಪನ್ಯಾಸಕರ ಬೋಧನಾವಧಿ, ಸೇವಾನುಭವಗಳನ್ನು ಪರಿಗಣಿಸಿ ವೇತನ ನಿಗದಿಪಡಿಸಿದೆ. ಹಾಗೆ ಮಾಡಿದಲ್ಲಿ ಎಲ್ಲಾ ಅತಿಥಿ ಉಪನ್ಯಾಸಕರಿಗೆ ಬೋದನಾವಧಿಯ ಕೊರತೆ ಉಂಟಾಗಬಹುದು ಎಂದರು.

ಕುಲಸಚಿವರು ಮಾತನಾಡಿ ಅತಿಥಿ ಉಪನ್ಯಾಸಕರು ಸಂಖ್ಯೆ ಹೆಚ್ಚುವರಿಯಾಗಿದ್ದು ಕೆಲವರನ್ನು ಕೆಲಸದಿಂದ ತೆಗೆಯಬೇಕಾಗುತ್ತದೆ ಎಂದರು.

ಸದಸ್ಯರಾದ ಶ್ರೀ ಧರ್ಮ ಪ್ರಸಾದ್ ಜಿ. ರವರು ಮಾತನಾಡಿ ಸರ್ಕಾರ ವೇತನವನ್ನು 176% ಹೆಚ್ಚು ಮಾಡಿದೆ ಎಂದರು. ಸಮಿತಿ ಮಾಡಿರುವ ಪಟ್ಟಿ ಸರಿ ಇಲ್ಲ ಎಂದಾದರೆ ಸರ್ಕಾರ ಜಾರಿಗೆ ತಂದಿರುವಂತೆಯೇ ವಿಶ್ವವಿದ್ಯಾಲಯದಲ್ಲೂ ಜಾರಿ ಮಾಡಬಹುದು ಎಂದರು.

ಮಾನ್ಯ ಕುಲಪತಿಗಳು ಯಾವುದಕ್ಕೂ ನಮ್ಮಲ್ಲಿ ಅನುದಾನ ಇಲ್ಲ ಎಂದರು.

ಸದಸ್ಯರಾದ ಶ್ರೀ ಧರ್ಮ ಪ್ರಸಾದ್ ಜಿ. ರವರು ಮಾತನಾಡಿ ಬೇರೆ ಟೆಂಡರ್, ಸಾಫ್ಟವೇರ್, ಹಾಗೂ ಇತರೆ ಖರೀದಿಗಳಿಗೆ ಅನುದಾನ ಇರುತ್ತದೆ ಆದರೆ ಇಂತಹ ವಿಷಯಗಳಿಗೆ ಅನುದಾನ ಇರೋದಿಲ್ಲ ಎಂದರು. ಅತಿಥಿ ಉಪನ್ಯಾಸಕರಿಗೆ ಕೊಡೋದಿಕ್ಕೆ ಯಾಕೆ ಹೀಗೆ ಮಾಡುತ್ತೀರಿ ಎಂದರು. ಇದಕ್ಕೆ ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರು ಧ್ವನಿಗೂಡಿಸಿದರು.

ಮಾನ್ಯ ಕುಲಪತಿಗಳು ಹಣಕಾಸು ಅಧಿಕಾರಿಗಳನ್ನು ಕರೆಸಿ ಅಭಿಪ್ರಾಯ ನೀಡಲು ತಿಳಿಸಿದರು. ಹಣಕಾಸು ಅಧಿಕಾರಿಗಳು ಅಭಿಪ್ರಾಯ ನೀಡಿ ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರದ ಅನುದಾನ ಬಂದಲ್ಲಿ ಅಥವಾ ಆಂತರಿಕ ಸಂಪನ್ಮೂಲ ಹೆಚ್ಚಾದಲ್ಲಿ ಮಾತ್ರ ಜಾರಿಗೆ ತರಬಹುದು ಇಲ್ಲವಾದಲ್ಲಿ ಕಷ್ಟವಾಗಬಹುದು ಎಂದರು.

ಸದಸ್ಯರಾದ ಶ್ರೀ ಧರ್ಮ ಪ್ರಸಾದ್ ಜಿ. ರವರು ಮಾತನಾಡಿ ವಿಶ್ವವಿದ್ಯಾಲಯವು ಸೆಲ್ಫ್ ಫೈನಾನ್ಸ್ ಕೋರ್ಸ್ ಪ್ರಾರಂಭಿಸಬೇಕು ಆಂತರಿಕ ಸಂಪನ್ಮೂಲ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದರು. ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್ ಹಾಗೂ ಶ್ರೀ ರಮೇಶಬಾಬುರವರು ಮಾತನಾಡಿ ತಾವು ಸರ್ಕಾರದಿಂದ ಅನುದಾನ ತರಲು ಏನು ಕ್ರಮ ಕೈಗೊಂಡಿದ್ದೀರಿ ಎಷ್ಟು ಅನುದಾನವನ್ನು ಸರ್ಕಾರದಿಂದ ತಂದಿದ್ದೀರಿ ಎಂಬ ಬಗ್ಗೆ ಮಾಹಿತಿ ನೀಡಿ ಎಂದರು.

ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ ಇದಕ್ಕೆಲ್ಲಾ ಪರಿಹಾರ ಇದೆ ಅದೇನೆಂದರೆ ದೂರ ಶಿಕ್ಷಣದ ವಿದ್ಯಾರ್ಥಿಗಳಿಗೆ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗೆ ಪ್ರವೇಶ ನೀಡಿದರೆ ಹಾಗೂ ದೂರ ಶಿಕ್ಷಣದ ಆನ್-ಲೈನ್ ಪ್ರವೇಶಕ್ಕೆ ಅನುಮತಿ ನೀಡಿದರೆ ಶುಲ್ಕ ಪಾವತಿಯಾಗುವುದರಿಂದ ಆಂತರಿಕ ಸಂಪನ್ಮೂಲವಾಗಿ ಬಳಸಬಹುದು ಎಂದರು.

ಸದಸ್ಯರಾದ ಶ್ರೀ ಅಶೋಕ್ ಡಿ ರೇವಣಕರ್‌ರವರು ಮಾತನಾಡಿ ಸಮಿತಿ ನಿಗದಿಪಡಿಸಿದ ವೇತನ ಜಾಸ್ತಿ ಅಲ್ಲ ಆದರೆ ಸಂಪನ್ಮೂಲ ಬೇಕಾಗಿದೆ ಎಂದರು.

ಸದಸ್ಯರಾದ ಶ್ರೀ ಧರ್ಮ ಪ್ರಸಾದ್ ಜಿ. ರವರು ಮಾತನಾಡಿ ಇದು ಅತಿಥಿ ಉಪನ್ಯಾಸಕರ ತುಂಬಾ ದಿನಗಳ ಬೇಡಿಕೆ ನ್ಯಾಯಬದ್ದವಾಗಿ ಅವರಿಗೆ ಕೊಡಲೇಬೇಕು ಎಂದರು. ಎಂಟು ಸ್ಲ್ಯಾಬ್ ಇದೆ ಏನು ಬದಲಾವಣೆ ಮಾಡಬೇಕೋ ಮಾಡಿ ಎಂದರು.

ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥರವರು ಮಾತನಾಡಿ ಬದಲಾವಣೆ ಮಾಡುವುದು ಸಾಧ್ಯವಿಲ್ಲ. ವಿಶ್ವವಿದ್ಯಾಲಯವೇ ರಚಿಸಿದ ಸಮಿತಿಯು ಸಭೆ ಸೇರಿ ಪ್ರಸ್ತಾವನೆ ಸಿದ್ದಪಡಿಸಿ ಸಿಂಡಿಕೇಟಿಗೆ ಮಂಡಿಸಲಾಗಿದೆ. ಈಗ ಅನುದಾನ ಕೊರತೆ ಇದೆ ಎನ್ನುವುದು ಸರಿಯಲ್ಲ ಇದನ್ನು ಜಾರಿಗೆ ತಂದರೆ ವಿಶ್ವವಿದ್ಯಾಲಯಕ್ಕೆ ಒಳ್ಳೆಯ ಹೆಸರು ಬರುತ್ತದೆ. ಸಂಪನ್ಮೂಲ ಹೇಗೆ ಕ್ರೋಢೀಕರಿಸಬಹುದು ಎಂಬ ಬಗ್ಗೆ ಪ್ರಯತ್ನ ಮಾಡಿ ಎಂದರು.

ಸದಸ್ಯರಾದ ಶ್ರೀ ಧರ್ಮ ಪ್ರಸಾದ್ ಜಿ. ರವರು ಮಾತನಾಡಿ ಮುಂದಿನ ಸಭೆಯಲ್ಲಿ ಯಾವ ಯಾವ ಸ್ಲ್ಯಾಬ್‌ಗೆ ಎಷ್ಟು ಅತಿಥಿ ಉಪನ್ಯಾಸಕರಿದ್ದಾರೆ ಎಂಬ ಮಾಹಿತಿಯನ್ನು ನೀಡಬೇಕು ಎಂದರು. ಮುಂದುವರೆದು ಮಾತನಾಡಿ ಅತಿಥಿ ಉಪನ್ಯಾಸಕರಿಗೆ ಪಿಎಫ್ ಮತ್ತು ಇ.ಎಸ್.ಐ ಸೌಲಭ್ಯ ಕೊಡಿಸುವುದಕ್ಕೆ ಸಾಧ್ಯತೆ ಇದ್ದರೆ ಮಾಡಬಹುದು. ಜೇಷ್ಠತಾ ಪಟ್ಟಿ ಸಿದ್ದಪಡಿಸಬಹುದು ಜೇಷ್ಠತೆಗನುಸಾರವಾಗಿ ಬೋಧನಾವಧಿ ಹಂಚಿಕೆ ಮಾಡಬಹುದು. ಎಲ್ಲಾ ಅತಿಥಿ ಉಪನ್ಯಾಸಕರಿಗೆ 12 ತಿಂಗಳು ಮಾಡಿ ಒಂದು ದಿನ ಬಿಡುಗಡೆ ಮಾಡಿ ಆದೇಶ ಕೊಡಬಹುದು. ಮಹಿಳಾ ಅತಿಥಿ ಉಪನ್ಯಾಸಕರಿಗೆ 4 ತಿಂಗಳು ಸಂಬಳ ಸಹಿತ ಮಾತೃತ್ವ ರಜೆ ಮಂಜೂರು ಮಾಡಬೇಕು. ಆದಾಯ ತೆರಿಗೆಯನ್ನು ವೇತನದಲ್ಲಿ ಕಟಾವಣೆ ಮಾಡಬೇಕು ಎಂದರು. ಅತಿಥಿ ಉಪನ್ಯಾಸಕರು ಎಂಬ ಪದನಾಮವನ್ನು ಬದಲಾವಣೆ ಮಾಡಬೇಕು ಎಂದರು.

ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ ಅತಿಥಿ ಉಪನ್ಯಾಸಕರು ಎಂಬ ಪದನಾಮಕ್ಕೆ ಬದಲಾಗಿ ಹಂಗಾಮಿ ಉಪನ್ಯಾಸಕರು ಎಂದು ಮಾಡಬಹುದು ಎಂದರು. ಸದಸ್ಯರಾದ ಪ್ರೊ. ವಿ. ಕೃಷ್ಣರವರು ಮಾತನಾಡಿ ಬೋಧನಾ ಸಹಾಯಕರು ಎಂದು ಬದಲಾವಣೆ ಮಾಡಬಹುದು ಎಂದರು.

ಸದಸ್ಯರಾದ ಶ್ರೀ ಧರ್ಮ ಪ್ರಸಾದ್ ಜಿ. ರವರು ಮಾತನಾಡಿ ಸಮಿತಿಯ ವರದಿಯಲ್ಲಿ ಮಾಡಿರುವ ಶಿಫಾರಸ್ಸುಗಳನ್ನು ಸಭೆಯಲ್ಲಿ ಓದಿದರು.

1) ಅತಿಥಿ ಉಪನ್ಯಾಸಕರು ಎಲ್ಲಾ ಪರೀಕ್ಷಾ ಚಟುವಟಿಕೆಗಳು / ಪಠ್ಯೇತರ ಚಟುವಟಿಕೆಗಳನ್ನು ಉಚಿತವಾಗಿ ಮಾಡಬೇಕು.

2) ಸದರಿಯವರನ್ನು ಪಿಹೆಚ್.ಡಿ ಮಾರ್ಗದರ್ಶಕರಾಗಿ ನೇಮಕ ಮಾಡುವ ಬಗ್ಗೆ ಪರಿಶೀಲಿಸಬೇಕು.

3) 10 ವರ್ಷಕ್ಕೂ ಮೇಲ್ಪಟ್ಟು ಸೇವೆ ಸಲ್ಲಿಸಿರುವವರನ್ನು 5 ವರ್ಷಕ್ಕೊಮ್ಮೆ ಮರು ನೇಮಕಾತಿ ಮಾಡಬಹುದು.

4) 10 ವರ್ಷಕ್ಕೂ ಮೇಲ್ಪಟ್ಟು ಸೇವೆ ಸಲ್ಲಿಸಿರುವವರನ್ನು ಸೇವೆಯಲ್ಲಿ ಖಾಯಂಗೊಳಿಸಲು ನಿಯಮಾನುಸಾರ ಪರಿಶೀಲಿಸಬಹುದು.

5) ಅತಿಥಿ ಉಪನ್ಯಾಸಕರಿಗೆ ಒಂದು ತಿಂಗಳಿಗೆ ಒಂದು ರಜೆ ಇದೆ. ತಿಂಗಳಿಗೆ ಒಂದು ಗಳಿಕೆ ರಜೆ ಕೊಡಬೇಕು. ಯಾರು ಅದನ್ನು ಉಪಯೋಗಿಸಿಕೊಳ್ಳುವುದಿಲ್ಲವೋ ಅವರಿಗೆ ವರ್ಷದ ಕೊನೆಯಲ್ಲಿ ಗಳಿಕೆ ರಜೆ ನಗದೀಕರಣ ಮಾಡಿಕೊಳ್ಳಲು ಅನುವು ಮಾಡಿಕೊಡಬಹುದು.

ವೇತನ ಪಾವತಿಯ ಪ್ರಕ್ರಿಯೆಯನ್ನು ಗಣಕೀಕೃತಗೊಳಿಸಿ ಅತಿಥಿ ಉಪನ್ಯಾಸಕರಿಗೆ ತೊಂದರೆಯಾಗದಂತೆ ಕ್ರಮ ವಹಿಸುವುದು.

ಕುಲಸಚಿವರು ಮಾತನಾಡಿ ಮೇಲ್ಕಂಡ ಶಿಫಾರಸ್ಸುಗಳನ್ನು ನಿಯಮಾನುಸಾರ ಪರಿಶೀಲಿಸಲಾಗುವುದು ಎಂದು ಹೇಳಿದರು.

ಮಾನ್ಯಕುಲಪತಿಗಳು ಮಾತನಾಡಿ ಕೆ.ಸಿ.ಎಸ್.ಆರ್.ಅನ್ವಯ ಅತಿಥಿ ಉಪನ್ಯಾಸಕರಿಗೆ ಗಳಿಕೆ ರಜೆ ನೀಡಲು ಅವಕಾಶವಿರುವುದಿಲ್ಲ ಎಂದರು.

ಸದಸ್ಯರಾದ ಶ್ರೀ ಧರ್ಮ ಪ್ರಸಾದ್ ಜಿ. ರವರು ಮಾತನಾಡಿ ಮೇಲ್ಕಂಡ ಎಲ್ಲಾ ಶಿಫಾರಸ್ಸುಗಳನ್ನು ಅತಿಥಿ ಉಪನ್ಯಾಸಕರ ಜೊತೆಯಲ್ಲಿ ಆರ್.ಟಿ.ಎ ಗಳಿಗೂ ಅನ್ವಯವಾಗುವಂತೆ ಕುಲಸಚಿವರ ಅಧ್ಯಕ್ಷತೆಯ ಸಮಿತಿಯಲ್ಲಿ ಶಿಫಾರಸ್ಸು ಮಾಡಲಾಗಿದೆ ಇವುಗಳನ್ನು ಜಾರಿಗೆ ತರಬೇಕು ಎಂದರು.

ನಿರ್ಣಯ : ಸುಧೀರ್ಘ ಚರ್ಚೆಯ ನಂತರ ಸಮಿತಿಯು ಸಿದ್ಧಪಡಿಸಿದ ವೇತನ ಶ್ರೇಣಿಯ ಸ್ಲ್ಯಾಬ್‌ಗಳಿಗೆ ತಕ್ಕಂತೆ ಎಷ್ಟು ಅತಿಥಿ ಉಪನ್ಯಾಸಕರು ಬರುತ್ತಾರೆ ಹಾಗೂ ಎಷ್ಟು ಅನುದಾನ ಬೇಕಾಗುತ್ತದೆ ಎಂಬ ಪಟ್ಟಿಯನ್ನು ವಿಶ್ವವಿದ್ಯಾಲಯದ ಮಾನವ ಸಂಪನ್ಮೂಲ ವಿಭಾಗದ ಅಧಿಕಾರಿಗಳು, ಹಣಕಾಸು ಅಧಿಕಾರಿಗಳ ಜೊತೆಗೂಡಿ ಪಟ್ಟಿಯನ್ನು ಸಿದ್ದಪಡಿಸಿ ಮುಂದಿನ ಸಭೆಗೆ ಮಂಡಿಸಲು ತಿಳಿಸಲಾಯಿತು.

## ಮಾನವ ಸಂಪನ್ಮೂಲ ವಿಭಾಗ

**2022–ಸಿಂ–1.03:** ಕುವೆಂಪು ವಿಶ್ವವಿದ್ಯಾಲಯದ ನಕಲಿ ಉತ್ತರ ಪತ್ರಿಕೆ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿತರಿಗೆ ಕುವೆಂಪು ವಿಶ್ವವಿದ್ಯಾಲಯದ ಸಕ್ಷಮ ನೇಮಕಾತಿ ಪ್ರಾಧಿಕಾರದ ವತಿಯಿಂದ ಅಭಿಯೋಜನಾ ಮಂಜೂರಾತಿ ಪತ್ರ ನೀಡುವ ಕುರಿತು.

ನಿರ್ಣಯ: ಕುವೆಂಪು ವಿಶ್ವವಿದ್ಯಾಲಯದ ನಕಲಿ ಉತ್ತರ ಪತ್ರಿಕೆ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿತರಿಗೆ ಕುವೆಂಪು ವಿಶ್ವವಿದ್ಯಾಲಯದ ಸಕ್ಷಮ ನೇಮಕಾತಿ ಪ್ರಾಧಿಕಾರದ ವತಿಯಿಂದ ಅಭಿಯೋಜನಾ ಮಂಜೂರಾತಿ ಪತ್ರ ನೀಡಲು ಕ್ರಮ ಕೈಗೊಳ್ಳಲು ಸಭೆಯು ನಿರ್ಣಯಿಸಿತು.

**2022–ಸಿಂ–1.04:** ಅಕ್ರಮ ಮರಕಡಿತಲೆ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:25–10–2021 ಮತ್ತು 15–11–2021ರ ಸರ್ಕಾರದ ಪತ್ರದಂತೆ ದಿನಾಂಕ:21–01–2021ರ ಸಿಂಡಿಕೇಟ್ ನಿರ್ಣಯವನ್ನು ಹಿಂಪಡೆದು ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಲು ಅನುಮತಿ ನೀಡುವ ಬಗ್ಗೆ.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ಅಕ್ರಮ ಮರಕಡಿತಲೆ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:21–01–2021ರ ಸಿಂಡಿಕೇಟ್ ನಿರ್ಣಯವನ್ನು ಹಿಂಪಡೆದು ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಲು ಅನುಮತಿ ನೀಡುವಂತೆ ಸರ್ಕಾರದಿಂದ ದಿನಾಂಕ:25–10–2021 ಮತ್ತು 15–11–2021ರಂದು ಪತ್ರ ಬಂದಿದ್ದು, ವಿಶ್ವವಿದ್ಯಾಲಯದಿಂದ ಅನುಮತಿ ನೀಡಲು ಕ್ರಮ ಕೈಗೊಳ್ಳದಿದ್ದಲ್ಲಿ ಸರ್ಕಾರದ ಹಂತದಲ್ಲಿಯೇ ಕ್ರಮಕೈಗೊಳ್ಳಲಾಗುವುದೆಂದು ಹಾಗೂ ವಿಷಯವನ್ನು ಗಂಭೀರವಾಗಿ ಪರಿಗಣಿಸುವಂತೆ ನಿರ್ದೇಶನ ಬಂದಿರುವುದಾಗಿ ಸಭೆಗೆ ತಿಳಿಸಿದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪ ಹೆಚ್ ಇವರು ಮಾತನಾಡಿ ವಿಶ್ವವಿದ್ಯಾಲಯದ ಯಾವುದೇ ನೌಕರರು ತಮ್ಮ ವೈಯಕ್ತಿಕ ಉಪಯೋಗಕ್ಕಾಗಿ ಈ ಕೆಲಸ ಮಾಡಿರುವುದಿಲ್ಲ. ವಿದ್ಯಾರ್ಥಿ/ನಿ ನಿಲಯಗಳನ್ನು ನಿರ್ಮಾಣ ಮಾಡಬೇಕಾಗಿರುವ ಹಿನ್ನೆಲೆಯಲ್ಲಿ ಮರ ಕಟಾವಣೆ ಮಾಡಲಾಗಿದೆ. ಈ ವಿಷಯದಲ್ಲಿ ನಾವು ನೌಕರರ ಹಿತಾಸಕ್ತಿ ಕಾಪಾಡಬೇಕಾಗಿರುತ್ತದೆ. ಆದ್ದರಿಂದ ಇನ್ನೊಮ್ಮೆ ಈ

ವಿಷಯದ ಕುರಿತು ಸರ್ಕಾರಕ್ಕೆ ವಿವರವಾದ ಪತ್ರ ಬರೆಯಬೇಕು ಎಂದರು. ಕುಲಸಚಿವರು ಮಾತನಾಡಿ ಈಗಾಗಲೇ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ನೌಕರರ ಪರವಾಗಿ ಕ್ರಮ ಕೈಗೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಪುನ: ಮಾತನಾಡಿದ ಸದಸ್ಯರಾದ ಶ್ರೀ ರಾಮಲಿಂಗಪ್ಪ ಹೆಚ್. ಇವರು ಹಿಂದಿನ ಕುಲಸಚಿವರು ಈ ವಿಷಯದ ಬಗ್ಗೆ ವಿವರವಾಗಿ ಸರ್ಕಾರಕ್ಕೆ ತಿಳಿಸಿರುವುದಿಲ್ಲ ಒಂದು ವಾಕ್ಯದಲ್ಲಿ ಉತ್ತರಿಸಿರುತ್ತಾರೆ. ಇದರಿಂದ ಸರ್ಕಾರಕ್ಕೆ ವಸ್ತು ಸ್ಥಿತಿ ಗೊತ್ತಾಗಿಲ್ಲ ಸಿಬ್ಬಂದಿಗಳು ತಮ್ಮ ವೈಯುಕ್ತಿಕ ಹಿತಕ್ಕಾಗಿ ಈ ಕೆಲಸ ಮಾಡಿಲ್ಲ ಆದ್ದರಿಂದ ನೌಕರರ ಹಿತಾಸಕ್ತಿಯನ್ನು ಪರಿಗಣಿಸಿ ಇನ್ನೊಮ್ಮೆ ಪತ್ರ ಬರೆಯುವಂತೆ ಕೋರಿದರು. ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು, ಶ್ರೀ ಸಂತೋಷ್ ಬಳ್ಳೇಕೆರೆಯವರು ಹಾಗೂ ಶ್ರೀ ರಮೇಶಬಾಬುರವರು ಕೂಡ ಸರ್ಕಾರಕ್ಕೆ ಇನ್ನೊಮ್ಮೆ ವಿವರವಾದ ಪತ್ರ ಬರೆಯುವಂತೆ ಒತ್ತಾಯಿಸಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಆಡಳಿತ ನಡೆಸುವ ಸಂದರ್ಭದಲ್ಲಿ ಅನಿವಾರ್ಯ ಕಾರಣದಿಂದ ಕೈಗೊಂಡ ಕ್ರಮವಾಗಿರುತ್ತದೆ. ಗೊತ್ತಿದ್ದೂ ಮಾಡಿದ್ದರೆ ತಪ್ಪಾಗುತ್ತದೆ ಆದರೆ ವಿಶ್ವವಿದ್ಯಾಲಯದ ಪರವಾಗಿ ಕೆಲಸ ಮಾಡುವಾಗ ನಡೆದಿರುವ ಕೃತ್ಯವಾಗಿದೆ, ವಿಶ್ವವಿದ್ಯಾಲಯದ ಪರವಾಗಿ ಕೆಲಸ ಮಾಡುವಾಗ ಹೀಗೆ ಆದರೆ ಅಧಿಕಾರಿಗಳು ಕೆಲಸ ಮಾಡುವುದು ಕಷ್ಟವಾಗುತ್ತದೆ. ಸಾವಿರ ಅಪರಾಧಿಗಳು ತಪ್ಪಿಸಿಕೊಂಡರೂ ಒಬ್ಬ ನಿರಪರಾಧಿಕಾರಿಗೆ ಶಿಕ್ಷೆ ಆಗಬಾರದು ಆದ್ದರಿಂದ ಸ್ವಾಭಾವಿಕ ನ್ಯಾಯದ ದೃಷ್ಟಿಯಿಂದ ಎಲ್ಲಾ ದಾಖಲೆಗಳೊಂದಿಗೆ ಸರ್ಕಾರಕ್ಕೆ ಮತ್ತೊಮ್ಮೆ ವಿವರವಾದ ಪತ್ರ ಬರೆಯಬಹುದು ಎಂದರು.

ಕುಲಸಚಿವರು ಮಾತನಾಡಿ ಕಡತದಲ್ಲಿ ನೌಕರರನ್ನು ಸಮರ್ಥಿಸುವಂತಹ ಯಾವುದೇ ದಾಖಲೆಗಳಿಲ್ಲ ಎಂದರು. ಹಾಗೂ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗಳ ಪತ್ರದಲ್ಲಿ 22 ಸಾಗುವಾನಿ ಮರಗಳು ಹಾಗೂ ಹುನಾಲು ಜಾತಿಯ ಮರಗಳನ್ನು ಕಟಾವಣೆ ಮಾಡಲಾಗಿದೆ ಹಾಗೂ ಸರ್ಕಾರಕ್ಕೆ ಅಂದಾಜು ರೂ. 34000–00 ಆರ್ಥಿಕ ನಷ್ಟವನ್ನುಂಟು ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಕಟಾವಣೆ ಮಾಡುವ ಮುನ್ನ ಅರಣ್ಯಾಧಿಕಾರಿಗಳ ಗಮನಕ್ಕೆ ತಂದು ಅನುಮೋದನೆ ಪಡೆದು ಕಟಾವು ಮಾಡಬಹುದಿತ್ತಲ್ಲವೇ ಎಂದು ಪ್ರಶ್ನಿಸಿದರು.

ಸದಸ್ಯರಾದ ಪ್ರೊ. ರಮೇಶ್‌ರವರು ಸರ್ಕಾರಕ್ಕೆ ಇನ್ನೊಮ್ಮೆ ಪತ್ರ ಬರೆಯಬಹುದು ಎಂದರು. ಸದಸ್ಯರಾದ ಪ್ರೊ. ವಿ. ಕೃಷ್ಣರವರು ಮಾತನಾಡಿ ಸಂಬಂಧಪಟ್ಟ ಅಧಿಕಾರಿ/ನೌಕರರನ್ನು ಕರೆಸಿ ವರದಿ ಪಡೆದು ಸಲ್ಲಿಸಬಹುದು ಎಂದರು.

ಸದಸ್ಯರಾದ ಶ್ರೀ ರಮೇಶಬಾಬುರವರು ಮಾತನಾಡಿ ನಡೆದ ಘಟನೆಯ ಬಗ್ಗೆ ಪೂರ್ಣ ಮಾಹಿತಿ ಇಲ್ಲದೇ ಇರುವುದರಿಂದ ಸಂಬಂಧಪಟ್ಟ ಅಧಿಕಾರಿ/ನೌಕರರಿಂದ ಮಾಹಿತಿ ಪಡೆದು ಸಲ್ಲಿಸಬಹುದು ಎಂದರು.

ಸದಸ್ಯರಾದ ಶ್ರೀ ನಟೇಶ್‌ರವರು ಮಾತನಾಡಿ ಸಂಬಂಧಪಟ್ಟವರಿಂದ ದಾಖಲೆ ಪಡೆದು ಪುನ: ವರದಿ ಸಲ್ಲಿಸಬಹುದು ಎಂದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಘಟನೆಯ ಬಗ್ಗೆ ಸಂಬಂಧಪಟ್ಟ ಅಧಿಕಾರಿ/ನೌಕರರಿಂದ ವರದಿ ಪಡೆದು ಸ್ವಾಭಾವಿಕ ನ್ಯಾಯದ ದೃಷ್ಟಿಯಿಂದ ಅವರ ವರದಿಯನ್ನು ಸರ್ಕಾರಕ್ಕೆ ಕಳುಹಿಸುತ್ತಾ, ಸರ್ಕಾರದ ಹಂತದಲ್ಲಿಯೇ ಮುಂದಿನ ಕ್ರಮ ಕೈಗೊಳ್ಳುವಂತೆ ಕೋರಿ ಪತ್ರ ಬರೆಯಲು ಸಭೆಯು ನಿರ್ಣಯಿಸಿತು.

**2022-ಸಿಂ-1.05** : ದಿ॥ ಮಂಜುಳಾಬಾಯಿ ವೈ. – ಇವರ ವೈದ್ಯಕೀಯ ಚಿಕಿತ್ಸಾ ವೆಚ್ಚ ಪಾವತಿಸುವ ಕುರಿತು.

ನಿರ್ಣಯ: ದಿ॥ ಮಂಜುಳಾಬಾಯಿ ವೈ. – ಇವರ ವೈದ್ಯಕೀಯ ಚಿಕಿತ್ಸಾ ವೆಚ್ಚ ಪಾವತಿಸಲು ಸಭೆಯು ಅನುಮತಿಸಿತು.

**2022-ಸಿಂ-1.06:** ವಿವಿಧ ಶಾಲಾ ಪರಿಕಲ್ಪನೆಯ ಶಾಲೆಗಳಿಗೆ ನಿರ್ದೇಶಕರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

ನಿರ್ಣಯ: ವಿವಿಧ ಶಾಲಾ ಪರಿಕಲ್ಪನೆಯ ಶಾಲೆಗಳಿಗೆ ನಿರ್ದೇಶಕರನ್ನು ನೇಮಿಸಿರುವುದನ್ನು ಸಭೆಯು ಪರಿಶೀಲಿಸಿ ಯಥಾವತ್ತಾಗಿ ಸ್ಥಿರೀಕರಿಸಿತು.

**2022-ಸಿಂ-1.07:** ಅಧ್ಯಾಪಕ ಹಾಗೂ ಅಧ್ಯಾಪಕೇತರ ನೌಕರರುಗಳಿಗೆ 2022-23 ನೇ ಸಾಲಿನ ವಯೋನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ 2022-23ನೇ ಸಾಲಿನಲ್ಲಿ ವಯೋ ನಿವೃತ್ತಿ ಹೊಂದಲು ಅನಮತಿಗಾಗಿ ಮಂಡಿಸಿದೆ ಎಂದರು. ಎಲ್ಲಾ ಸದಸ್ಯರು ಇದಕ್ಕೆ ಒಪ್ಪಿದರು. ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ನಿಯಮಾನುಸಾರ ಘಟಕ ಕಾಲೇಜುಗಳಿಗೆ ಯಾವ ರೀತಿ ನಿಯಮಗಳನ್ನು ಅನುಸರಿಸಲಾಗುತ್ತದೆಯೋ ಅದೇ ನಿಯಮಗಳನ್ನು ವಿಶ್ವವಿದ್ಯಾಲಯ ಎಸ್.ಎಂ.ಆರ್ ಕಾಲೇಜಿಗೂ ಅನುಸರಿಸುವಂತೆ ಕೋರಿದರು. ಪ್ರೊ. ವಿ. ಕೃಷ್ಣರವರು ಮಾತನಾಡಿ ನಿವೃತ್ತ ಅಧ್ಯಾಪಕ ಹಾಗೂ ಅಧ್ಯಾಪಕೇತರ ನೌಕರರುಗಳಿಗೆ ನಿವೃತ್ತಿ ವೇತನ ಹಾಗೂ ಇತರೆ ಎಲ್ಲಾ ಸೌಲಭ್ಯಗಳನ್ನು ಕೂಡಲೇ ದೊರೆಯುವಂತೆ ಕ್ರಮ ಕೈಗೊಳ್ಳಬೇಕು ಎಂದರು.

ನಿರ್ಣಯ: ಚರ್ಚೆಯ ನಂತರ ಅಧ್ಯಾಪಕ ಹಾಗೂ ಅಧ್ಯಾಪಕೇತರ ನೌಕರರುಗಳಿಗೆ 2022-23 ನೇ ಸಾಲಿನ ವಯೋನಿವೃತ್ತಿ ಹೊಂದಲು ಅನುಮತಿ ನೀಡಲಾಯಿತು.

**2022-ಸಿಂ-1.08:** ವೈದ್ಯಕೀಯ ಚಿಕಿತ್ಸಾ ವೆಚ್ಚಗಳ ಮೊತ್ತ ಪಾವತಿಸುವ ಕುರಿತು.

ನಿರ್ಣಯ: ವೈದ್ಯಕೀಯ ಚಿಕಿತ್ಸಾ ವೆಚ್ಚಗಳ ಮೊತ್ತ ಪಾವತಿಸಲು ಸಭೆಯು ಅನುಮತಿ ನೀಡಿತು.

**2022-ಸಿಂ-1.09:** ದಿವಂಗತ ವಿಜಯಕುಮಾರ ಬಿ.–ಇವರ ಕುಟುಂಬಕ್ಕೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು.

ಚರ್ಚೆ: ಕುಲಸಚಿವರು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು ಸಭೆಗೆ ವಿಷಯ ಮಂಡಿಸಿದರು. ಇದಕ್ಕೆ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಿ ಎಂದು ಎಲ್ಲ ಸದಸ್ಯರು ತಿಳಿಸಿದರು. ಸದಸ್ಯರಾದ ಶ್ರೀ ರಾಮಲಿಂಗಪ್ಪರವರು ಮಾತನಾಡಿ ಪದವೀಧರರಿಗೆ ಅವರ ಪದವಿ ಅರ್ಹತೆ ತಕ್ಕಂತೆ ಹುದ್ದೆ ನೀಡಲು ಸಾಧ್ಯವಿಲ್ಲ ಆದರೆ ಪ್ರಥಮ ದರ್ಜೆ ಸಹಾಯಕರ ಹುದ್ದೆಯನ್ನಾದರೂ ನೀಡಬೇಕು ಎಂದು ಒತ್ತಾಯಿಸಿದರು.

ಕುಲಸಚಿವರು ಮಾತನಾಡಿ ಈಗ ಪ್ರಥಮ ದರ್ಜೆ ಸಹಾಯಕರ ಹುದ್ದೆ ನೀಡಿದರೆ ಹಿಂದೆ ನೇಮಕ ಆದ ಇತರರು ತಮಗೂ ಪ್ರಥಮ ದರ್ಜೆ ಸಹಾಯಕರ ಹುದ್ದೆ ನೀಡಬೇಕೆಂದು ಕೇಳುತ್ತಾರೆ. ಈಗಾಗಲೇ ಕೇಳುತ್ತಿದ್ದಾರೆ ಎಂದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪರವರು ಮಾತನಾಡಿ ಈ ಸಿಂಡಿಕೇಟ್ ನಂತರ ಕೆಲಸ ನೀಡುವವರಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆ ನೀಡಿ ಎಂದರು.

ಸದಸ್ಯರಾದ ಶ್ರೀ ಅಶೋಕ್ ಡಿ. ರೇವಣ್‌ಕರ್ ರವರು ಮಾತನಾಡಿ ಸರ್ಕಾರದ ನೇಮಕಾತಿಯಲ್ಲಿ ಪ್ರಥಮ ದರ್ಜೆ ಸಹಾಯಕರ ಹುದ್ದೆ ನೀಡುತ್ತಿದ್ದಾರೆ. ಇತ್ತೀಚೆಗೆ ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ನಡೆದ ಸಿಂಡಿಕೇಟ್ ಸಭೆಯಲ್ಲಿ ಒಬ್ಬರಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆ ನೀಡಲು ತೀರ್ಮಾನಿಸಲಾಗಿದೆ ಎಂದರು

ಕುಲಸಚಿವರು ಮಾತನಾಡಿ ಈ ಕುರಿತು ಕಾನೂನು ಅಭಿಪ್ರಾಯ ಪಡೆದು ಕ್ರಮ ಕೈಗೊಳ್ಳುತ್ತೇವೆ ಎಂದರು ಇದಕ್ಕೆ ಎಲ್ಲಾ ಸದಸ್ಯರು ಒಪ್ಪಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ರವರು ಮಾತನಾಡಿ ದಿವಂಗತ ರಮಾಮಣಿ ಕಿರಿಯ ಸಹಾಯಕರು ಇವರ ಪುತ್ರಿಯಾದ ಡಿ.ಎ. ಶ್ವೇತಾ ಇವರಿಗೆ ಅನುಕಂಪದ ಆಧಾರದ ಮೇಲೆ ಕೆಲಸ ನೀಡಬೇಕೆಂದು ಕೋರಿದರು.

ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರು ಮಾತನಾಡಿ ದಿವಂಗತ ಡಾ. ಬೂದಾನಾಯಕ್ ಸಿ.ಬಿ. ಇವರ ಮಗನಾದ ಯಶ್‌ಪಾಲ್ ಇವರಿಗೂ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು ಪ್ರಸ್ತಾಪಿಸಿದರು.

ಕುಲಸಚಿವರು ಮಾತನಾಡಿ ಡಾ. ಬೂದಾನಾಯಕ್ ಇವರ ಪತ್ನಿ ಅನುದಾನಿತ ಶಾಲೆಯಲ್ಲಿ ಶಿಕ್ಷಕಿಯಾಗಿದ್ದು ಅವರ ವರಮಾನ ಸರ್ಕಾರವು ನಿಗದಿಪಡಿಸಿರುವುದಕ್ಕಿಂತ ಹೆಚ್ಚಾಗಿರುವುದು ಕಂಡು ಬಂದಿದೆ ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಸ್ಪಷ್ಟೀಕರಣ ಪಡೆದು ಕ್ರಮ ಕೈಗೊಳ್ಳಲಾಗುವುದು ಎಂದರು ಇದ್ದಕ್ಕೆ ಎಲ್ಲಾ ಸದಸ್ಯರು ಒಪ್ಪಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಕುರಿತು ನಿಯಮಾನುಸಾರ ಪರಿಶೀಲಿಸಿ, ಹೆಚ್ಚಿನ ವಿದ್ಯಾರ್ಹತೆ ಪಡೆದವರಿಗೆ ಅರ್ಹತೆಯ ಆಧಾರದ ಮೇಲೆ ಪ್ರಥಮ ದರ್ಜೆ ಸಹಾಯಕರ ಹುದ್ದೆ ನೀಡುವ ಕುರಿತಂತೆ ಹಾಗೂ ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದಂತೆ ಕಾನೂನು ಅಭಿಪ್ರಾಯ ಪಡೆದು ಕ್ರಮಕೈಗೊಳ್ಳಲು ಕುಲಸಚಿವರಿಗೆ ಅಧಿಕಾರ ನೀಡಲಾಯಿತು.

**2022–ಸಿಂ–1.10:** ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸ್ಥಿರೀಕರಿಸಿರುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸ್ಥಿರೀಕರಣಕ್ಕಾಗಿ ಸಭೆಗೆ ಮಂಡಿಸಿದೆ ಎಂದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಹಾಗೂ ಶ್ರೀ ರಾಮಲಿಂಗಪ್ಪ ಹೆಚ್ ಇವರು ಮಾತನಾಡಿ ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗಕ್ಕೆ ನೇಮಿಸಿರುವ ಪ್ರೊ. ಯೋಗೀಶ್ ಎಸ್. ಎನ್ ಇವರ ಮೇಲೆ ಲೈಂಗಿಕ ಕಿರುಕುಳದ ಆಪಾದನೆ ಇರುವುದರಿಂದ ಅವರನ್ನು ಹೊರತುಪಡಿಸಿ ಉಳಿದವರ ನೇಮಕಾತಿಯನ್ನು ಸ್ಥಿರೀಕರಿಸಬಹುದು ಎಂದರು. ಸದರಿ ವಿಭಾಗಕ್ಕೆ ಪರಿನಿಯಮ ಪರಿಶೀಲಿಸಿ ಸೂಕ್ತ ನಿರ್ಣಯ ತೆಗೆದುಕೊಂಡು ಬೇರೆ ಅಧ್ಯಾಪಕರನ್ನು ನೇಮಿಸಬಹುದು ಎಂದರು.

ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ಪ್ರೊ. ಯೋಗೀಶ್ ಎಸ್. ಎನ್ ಇವರ ಮೇಲೆ ಲೈಂಗಿಕ ಕಿರುಕುಳದ ಆಪಾದನೆ ಇರುವುದರಿಂದ ವಿಚಾರಣೆಗಾಗಿ ನೇಮಿಸಿರುವ ಸಮಿತಿಯು ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ 3–4 ತಿಂಗಳಾಗಿದೆ. ಆದರೆ ಇನ್ನೂ ಯಾವ ಕ್ರಮಕೈಗೊಂಡಿರುವುದಿಲ್ಲ ಎಂದರು. ಕುಲಸಚಿವರು ಮಾತನಾಡಿ ಸಮಿತಿಯು ಸಲ್ಲಿಸಿರುವ ವರದಿಯನ್ನು ಕಡತದಲ್ಲಿ ಮಂಡಿಸಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಪರಿಶೀಲನೆಗಾಗಿ ಸಂಬಂಧಪಟ್ಟ ಇಲಾಖೆಗೆ ಕಳುಹಿಸಬೇಕಾಗಿದ್ದು ಅನುಮೋದನೆಗಾಗಿ ಮಾನ್ಯ ಕುಲಪತಿಗಳಿಗೆ ಕಡತ ಸಲ್ಲಿಸಿ 3 ತಿಂಗಳಾಗಿದೆ ಎಂದರು.

ಕುಲಪತಿಯವರು ಮಾತನಾಡಿ ಕೂಡಲೇ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಈ ವಿಷಯವು ಇತ್ಯರ್ಥ ಆಗುವವರೆಗೆ ಸದರಿಯವರು ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆಯುವುದು ಸೂಕ್ತ ಅಲ್ಲ ಎಂದರು. ಸದಸ್ಯರಾದ ಶ್ರೀ ರಮೇಶ್‌ಬಾಬುರವರು ಮಾತನಾಡಿ ಈ ರೀತಿ ವಿಳಂಭ ಆದಲ್ಲಿ ಸಾಕ್ಷಾಧಾರ ನಾಶ ಆಗಬಹುದು ಎಂದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗಕ್ಕೆ ಅಧ್ಯಕ್ಷರಾಗಿ ನೇಮಿಸಿರುವ ಪ್ರೊ. ಯೋಗೀಶ್ ಎಸ್. ಎನ್. ಇವರನ್ನು ಹೊರತು ಪಡಿಸಿ ಉಳಿದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸಭೆಯು ಸ್ಥಿರೀಕರಿಸಿತು. ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗಕ್ಕೆ ವಿಭಾಗದ ಇತರೆ ಪ್ರಾಧ್ಯಾಪಕರನ್ನು ಜೇಷ್ಠತೆಯ ಆಧಾರದ ಮೇಲೆ ವಿಭಾಗಾಧ್ಯಕ್ಷರನ್ನಾಗಿ ನೇಮಿಸಬೇಕೆಂದು ಸಭೆಯು ತೀರ್ಮಾನಿಸಿತು.

**2022–ಸಿಂ–1.11:** ಅಂತರ್ ವಿಶ್ವವಿದ್ಯಾಲಯ ವರ್ಗಾವಣೆ ಕುರಿತು.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ವಿಶ್ವವಿದ್ಯಾಲಯದ ಸಹಾಯಕ ಇಂಜಿನಿಯರ್ ಆದ ಶ್ರೀ ರಾಹುಲ್ ಡಿ.ಪಿ. ಇವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅಂತರ್ ವಿಶ್ವವಿದ್ಯಾಲಯ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿರುವುದರಿಂದ ಸರ್ಕಾರದಿಂದ ವಿಶ್ವವಿದ್ಯಾಲಯದ ಅಭಿಪ್ರಾಯ ಕೇಳಿರುತ್ತಾರೆ ಎಂದರು. ಸದಸ್ಯರಾದ ಪ್ರೊ. ವಿ. ಕೃಷ್ಣರವರು ಮಾತನಾಡಿ ಹುದ್ದೆ ಸಹಿತ ವರ್ಗಾವಣೆ ನೀಡಬಾರದು ಹುದ್ದೆ ರಹಿತವಾದರೆ ವರ್ಗಾವಣೆ ನೀಡಬಹುದು ಎಂದರು. ಸದಸ್ಯರಾದ ಶ್ರೀ ರಾಮಲಿಂಗಪ್ಪರವರು ಇದನ್ನು ಅನುಮೋದಿಸಿದರು. ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಅರಣ್ಯ ಭೂಮಿ ಹಸ್ತಾಂತರದ ಪ್ರಕ್ರಿಯೆ ನಡೆಯುತ್ತಿರುವುದರಿಂದ ಯಾವುದೇ ಕಾಮಗಾರಿ ನಡೆಯುತ್ತಿಲ್ಲವಾದ್ದರಿಂದ ಸದರಿಯವರಿಗೆ ಕೆಲಸ ಇರುವುದಿಲ್ಲ ಹಾಗೂ ಸದರಿ ನೌಕರರ ಪೋಷಕರು ಅನಾರೋಗ್ಯ ಪೀಡಿತರಾಗಿರುವುದರಿಂದ ವರ್ಗಾವಣೆಗೆ ಪೂರಕ ಅಭಿಪ್ರಾಯ ನೀಡುವುದು ಸೂಕ್ತ ಎಂದು ಹೇಳಿದರು. ಇದನ್ನು ಸದಸ್ಯರಾದ ಶ್ರೀ ರಮೇಶ್‌ಬಾಬು ಹಾಗೂ ಮತ್ತು ಶ್ರೀ ಸಂತೋಷ್ ಬಳ್ಳೇಕೆರೆಯವರು ಇದನ್ನು ಅನುಮೋದಿಸಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಹುದ್ದೆ ಸಹಿತವಾಗಿ ಅಂತರ್ ವಿಶ್ವವಿದ್ಯಾಲಯ ವರ್ಗಾವಣೆಗೆ ಅನುಮತಿ ಪತ್ರ ನೀಡಲು ಸಭೆಯು ನಿರ್ಣಯಿಸಿತು,

**2022–ಸಿಂ–1.12:** ವಿಶ್ವವಿದ್ಯಾಲಯದ ಘಟಕ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರುಗಳಿಗೆ ವಿವಿಧ ಹಂತಗಳ ವೃತ್ತಿ ಪದೋನ್ನತಿಯ ಅರ್ಹತಾ ದಿನಾಂಕಗಳನ್ನು ಪರಿಷ್ಕರಿಸಿರುವುದನ್ನು ಸ್ಥಿರೀಕರಿಸುವ ಬಗ್ಗೆ.

ನಿರ್ಣಯ: ಚರ್ಚೆಯ ನಂತರ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರುಗಳಿಗೆ ವಿವಿಧ ಹಂತಗಳ ವೃತ್ತಿ ಪದೋನ್ನತಿಯ ಅರ್ಹತಾ ದಿನಾಂಕಗಳನ್ನು ಪರಿಷ್ಕರಿಸಿರುವುದನ್ನು ಸ್ಥಿರೀಕರಿಸಿತು.

**2022-ಸಿಂ-1.13:** ದಿವಂಗತ ಜಾವೀದ್ ಅಹಮ್ಮದ್ ಬೇಗ್ – ಇವರ ಕುಟುಂಬಕ್ಕೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು.

ನಿರ್ಣಯ : ಈ ವಿಷಯದ ಕುರಿತು ಇದೇ ಸಭೆಯ ವಿಷಯ ಸಂಖ್ಯೆ **2022-ಸಿಂ-1.09** ರಲ್ಲಿ ತೆಗೆದುಕೊಂಡ ನಿರ್ಣಯವನ್ನು ಅನುಸರಿಸುವಂತೆ ಸಭೆಯು ತೀರ್ಮಾನಿಸಿತು.

**2022-ಸಿಂ-1.14:** ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ, ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ವರದಿಯಲ್ಲಿನ ಆಕ್ಷೇಪಿತ ಕಂಡಿಕೆ 4.1/2016-17 ಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳುವ ಕುರಿತು

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾಲೇಖಪಾಲರ ವರದಿ ಆಕ್ಷೇಪಿತ ಕಂಡಿಕೆ 4.132(ಬಿ) 2016-17ಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯು ದಿನಾಂಕ:14-12-2021 ರಂದು ಸೂಕ್ತ ಶಿಫಾರಸ್ಸುಗಳನ್ನೊಳಗೊಂಡ ಸದರಿ ವರದಿಯಲ್ಲಿನ ಶಿಫಾರಸ್ಸುಗಳಿಗೆ ಸೂಕ್ತ ಸಮಜಾಯಿಷಿ / ವರದಿ / ಮಾಹಿತಿಯನ್ನು ಸಂಬಂಧಪಟ್ಟ ದಾಖಲೆಗಳೊಂದಿಗೆ ಮಾಹಿತಿ ನೀಡುವಂತೆ ಮತ್ತು ವಸೂಲಿ ಮಾಡುವ ಪ್ರಕರಣಗಳಲ್ಲಿ ವಸೂಲಿ ಮಾಡಲು ಕ್ರಮವಹಿಸುವಂತೆ ತಿಳಿಸಿ ಮಾಹಿತಿಯನ್ನು 03 ದಿನಗಳೊಳಗಾಗಿ ಒದಗಿಸುವಂತೆ ತಿಳಿಸಿರುತ್ತಾರೆ.

ಘನತೆವೆತ್ತ ರಾಜ್ಯಪಾಲರ ಕಛೇರಿ ಪತ್ರ ಸಂಖ್ಯೆ: ಜಿಎಸ್ 05 ಕೆಪಿಎಂ 2022 ದಿನಾಂಕ: 04-02-2022ರಲ್ಲಿ ವಿಶ್ವವಿದ್ಯಾಲಯದಲ್ಲಿ ಕಾನೂನು ಬಾಹಿರವಾಗಿ ಅಧ್ಯಾಪಕರನ್ನು ನೇಮಿಸಿರುವ ಕುರಿತು ಶ್ರೀ ಗಜಾನನದಾಸ್ ಕೆ.ಜಿ ಇವರ ದೂರಿನ ಬಗ್ಗೆ ಪರಿಶೀಲಿಸಿ ಕಾರ್ಯ ನಿರ್ವಹಿಸುವ ಮೂರು ದಿನಗಳೊಳಗಾಗಿ ವರದಿಯನ್ನು ನೀಡುವಂತೆ ತಿಳಿಸಿರುತ್ತಾರೆ.

ಮಹಾಲೇಖಪಾಲರ ವರದಿ ಆಕ್ಷೇಪಿತ ಕಂಡಿಕೆ 4.132(ಬಿ) 2016-17ಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯು ದಿನಾಂಕ:14-12-2021 ರಂದು ಸೂಕ್ತ ಶಿಫಾರಸ್ಸುಗಳನ್ನೊಳಗೊಂಡ ಸದರಿ ವರದಿಯಲ್ಲಿನ ಶಿಫಾರಸ್ಸುಗಳಿಗೆ ಮೇಲ್ಕಂಡ ಪತ್ರದೊಂದಿಗೆ ಈ ಕೆಳಕಂಡಂತೆ ಮಾಹಿತಿ ನೀಡಲಾಗಿದೆ.

| ಕ್ರ.ಸಂ | ಕಂಡಿಕೆ ಸಂಖ್ಯೆ | ಶಿಫಾರಸ್ಸು | ಮಾಹಿತಿ |
|---|---|---|---|
| 1. | 4.1.3.2(ಬಿ) | ಶ್ರೀ ವಿದ್ಯಾಶಂಕರ್ ಹೊಂದಿದ್ದ ಎಂ.ಟೆಕ್ ಪದವಿಯನ್ನು ಎಐಸಿಟಿಇ ಮಾನ್ಯ ಮಾಡಿರಲಿಲ್ಲ ಮತ್ತು ಅವರು ಮಗಧ ವಿಶ್ವವಿದ್ಯಾಲಯದ ನಕಲಿ ಪಿಹೆಚ್‌ಡಿ ಪದವಿಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದಾಗ್ಯೂ ಸುಳ್ಳು ಪ್ರಮಾಣ ಪತ್ರವನ್ನು ನೀಡಿದ್ದಕ್ಕೆ ಇಲ್ಲಿಯವರೆಗೂ ಇಲಾಖೆಯು ಯಾವುದೇ ಕ್ರಮವನ್ನು ಕೈಗೊಳ್ಳದಿರುವುದಕ್ಕೆ ತೀವ್ರ ಅಸಮಧಾನ ವ್ಯಕ್ತಪಡಿಸುತ್ತದೆ. | ಶ್ರೀ. ವಿದ್ಯಾಶಂಕರ್ ಎಂ.ಹೆಚ್ – ಇವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲು ದಿನಾಂಕ: 27-10-2021 ರ ನೇಮಕಾತಿ ಪ್ರಾಧಿಕಾರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ವಿಷಯ ಮಂಡಿಸಿದ್ದು, ಸದರಿ ಸಭೆಯಲ್ಲಿ ಮಾನ್ಯ ಕುಲಪತಿಗಳಿಗೆ ಸಂಪೂರ್ಣ ಅಧಿಕಾರ ನೀಡಲಾಗಿರುತ್ತದೆ.<br><br>ಈ ಮಧ್ಯೆ ಶ್ರೀ. ವಿದ್ಯಾಶಂಕರ್ ಎಂ.ಹೆಚ್ – ಇವರು ಮಗಧ ವಿಶ್ವವಿದ್ಯಾಲಯದ ನಕಲಿ ಪಿ.ಹೆಚ್.ಡಿ ಪದವಿ ಪ್ರಮಾಣ ಪತ್ರ ನೀಡಿದ್ದಾರೆ ಎಂಬ ಆರೋಪದ ಪ್ರಕರಣದ ಕುರಿತು ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇಲಾಖಾ ವಿಚಾರಣೆ ನಡೆಸಿ, ವರದಿಯನ್ನು ನೀಡಿದ್ದು, |

| | | | |
|---|---|---|---|
| | | ವ್ಯಕ್ತಪಡಿಸುತ್ತದೆ.<br>ಮಹಾಲೇಖಪಾಲರು 2016–17ರ ಅವಧಿಯಲ್ಲಿ ಆಕ್ಷೇಪಣೆಯನ್ನು ಮಾಡಿದ್ದರೂ, ವಿಶ್ವವಿದ್ಯಾಲಯವು ವಿಳಂಭ ಧೋರಣೆ ಅನುಸರಿಸಿ ಅಕ್ಟೋಬರ್ 2021ರಲ್ಲಿ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುವುದು ಸರಿಯಾದ ಕ್ರಮವಾಗಿರಲಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ಇಲಾಖಾ ವಿಚಾರಣೆಯನ್ನು ಡಿಸೆಂಬರ್ 2019ರಲ್ಲಿ ಪ್ರಾರಂಭಿಸಿದ್ದರೂ, ಇನ್ನು ಮುಕ್ತಯಗೊಂಡಿರದ ಕಾರಣ ಈ ಕೂಡಲೇ ಸದರಿ ಪ್ರಾಧ್ಯಾಪಕರನ್ನು ಸೇವೆಯಿಂದ ವಜಾಗೊಳಿಸುವಂತೆ ಹಾಗೂ ಅವರಿಗೆ ನೇಮಕಾತಿ ದಿನಾಂಕದಿಂದ ಪಾವತಿಯಾಗಿರುವ ಮೊತ್ತವನ್ನು ವಸೂಲಾತಿ ಮಾಡುವಂತೆ ಸಮಿತಿ ಶಿಫಾರಸ್ಸು ಮಾಡುತ್ತದೆ.<br>ಅಲ್ಲದೇ ನಿಯಮ ಬಾಹಿರವಾಗಿ ಶೈಕ್ಷಣಿಕ ವಿದ್ಯಾರ್ಹತೆ ಇಲ್ಲದ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಕಾರಣಕರ್ತರಾದ ವಿಶ್ವವಿದ್ಯಾಲಯದ ಕುಲಪತಿ ಹಾಗೂ ಕುಲಸಚಿವರ ವಿರುದ್ಧ ಕಠಿಣ ಶಿಸ್ತಿನ ಕ್ರಮ ತೆಗೆದುಕೊಳ್ಳಲು ಮತ್ತು ಸರ್ಕಾರದ ಹಂತದಲ್ಲಿ ಕಡತಕ್ಕೆ ಒಪ್ಪಿಗೆ ಕೊಟ್ಟಿರುವ ಅಧಿಕಾರಿಗಳ ವಿರುದ್ಧವು ಸಹ ಶಿಸ್ತಿನ ಕ್ರಮ ಕೈಗೊಳ್ಳಲು ಸಮಿತಿಯು ಶಿಫಾರಸ್ಸು ಮಾಡುತ್ತದೆ. | ವರದಿಯ ಉಪಸಂಹಾರ ಈ ಕೆಳಕಂಡಂತಿರುತ್ತದೆ.<br><br>Ph.D Certificate with his application and no evidence of involvement of DO in Producing or inserting Ex.P9 fake Ph.D certificate, there was no necessity for the DA to get prejudiced by seeing the Ph.D certificate in the file, when there was no necessity of Ph.D certificate since, the DO was eligible under AICTE. Therefore it cannot be held that DO produced Ex.P9 Ph.D certificate, which was faked and forged and there by deceived or cheated the DA, while securing the post of lecturer in the University. Hence I answer the above point in the NEGATIVE and proceed to pass the following:-<br><br>**REPORT**<br>***"In View of my above detailed discussion and finding, I hold that the Disciplinary Authority has failed to prove the Articles of Charges framed against the delinquent official".*** |

ಸರ್ಕಾರದಿಂದ ವಿಶ್ವವಿದ್ಯಾಲಯವು ವಿಳಂಭ ಧೋರಣೆ ತೋರಿರುವುದು ಸರಿ ಇರುವುದಿಲ್ಲ ಎಂದು ಗಂಭೀರವಾಗಿ ಪತ್ರ ಬರೆದಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಪ್ರಕರಣದ ಕುರಿತು ದಿನಾಂಕ:28-02-2022ರ ಸಿಂಡಿಕೇಟ್ ಸಭೆಗೆ ವಿಷಯ ಮಂಡಿಸಿದ್ದು, ಸದರಿ ಸಭೆಯ ನಿರ್ಣಯದನುಸಾರ ಕ್ರಮ ಕೈಗೊಳ್ಳಲಾಗುವುದೆಂದು ಸರ್ಕಾರ ಮತ್ತು ಘನತೆವೆತ್ತ ರಾಜ್ಯಪಾಲರ ಕಛೇರಿಗೆ ತಿಳಿಸಲಾಗಿದೆ ಎಂದರು

ಸದಸ್ಯರಾದ ಪ್ರೊ. ಹೆಚ್.ಎನ್. ರಮೇಶ್ ರವರು ಮಾತನಾಡಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದೆ ಒಂದು ಸರ್ಕಾರದ ಮಟ್ಟದ ಸಭೆಗೆ ಹೋಗಿದ್ದಾಗ ಅಲ್ಲಿ ಈ ಅಬ್ಯರ್ಥಿಗೆ ಅರ್ಹತೆಯೇ ಇರಲಿಲ್ಲ ಆದರೂ ನೇಮಕಾತಿ ಆಗಿದೆ ಎಂದು ಚರ್ಚೆಯಾಗಿತ್ತು ಎಂದರು.

ಆಗ ಮಾತನಾಡಿದ ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ನಾವು ಈ ವಿಷಯದಲ್ಲಿ ವಿಷಯ ತಜ್ಞರಲ್ಲ. ವಿಶ್ವವಿದ್ಯಾಲಯವೇ ಪದೇ ಪದೇ ಸಮಿತಿ ರಚಿಸಿ ವರದಿ ಕೊಡ್ತಾ ಇದೆ. ಸಮಿತಿಯು ***"In View of my above detailed discussion and finding, I hold that the Disciplinary Authority has failed to prove the Articles of Charges framed against the delinquent official"*** ಎಂದು ವರದಿ ನೀಡಿದೆ ಈ ವರದಿಯನ್ನು ಏನು ಮಾಡುವುದು. ವಿಶ್ವವಿದ್ಯಾಲಯವು ಸದರಿ ಅಭ್ಯರ್ಥಿಯ ನೇಮಕಾತಿಗಾಗಿ ಅರ್ಜಿ ಸಲ್ಲಿಸಿರುವ ಅಧಿಸೂಚನೆಯಲ್ಲಿ ಎನ್.ಇ.ಟಿ/ಎಸ್.ಎಲ್.ಇ.ಟಿ/ಎಸ್.ಇ.ಟಿ ಮತ್ತು ಪಿಹೆಚ್.ಡಿ ಕಡ್ಡಾಯವಲ್ಲ ಎಂದು ನಮೂದಿಸಿದೆ. ನಮ್ಮ ವಿಶ್ವವಿದ್ಯಾಲಯದ ಎಂ.ಟೆಕ್ ಪದವಿ ಆಧಾರದ ಮೇಲೆ ನೇಮಕವಾಗಿದ್ದಾರೆ. ನಮ್ಮ ವಿಶ್ವವಿದ್ಯಾಲಯದ ಪದವಿಯನ್ನು ಈ ವಿಶ್ವವಿದ್ಯಾಲಯವೇ

ಪರಿಗಣಿಸದಿದ್ದರೆ ಇನ್ನು ಯಾರು ಪರಿಗಣಿಸುತ್ತಾರೆ ಎಂಬುದು ಪ್ರಶ್ನೆ. ಇದು ಬಿಟ್ಟು ಏನು ತೀರ್ಮಾನ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳೋಣ ಎಂದರು.

ಕುಲಸಚಿವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಾಧೀಶರು ವಿಚಾರಣೆ ನಡೆಸಿ ನೀಡಿರುವ ವರದಿಯನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದರು.

ನಿರ್ಣಯ :ಶ್ರೀ ವಿದ್ಯಾಶಂಕರ್ ಎಂ.ಹೆಚ್ – ಇವರ ನಕಲಿ ಪಿ.ಹೆಚ್.ಡಿ ಪದವಿ ಪ್ರಮಾಣ ಪತ್ರದ ಪ್ರಕರಣದ ಕುರಿತು ಸಭೆಯು ಸುಧೀರ್ಘವಾಗಿ ಚರ್ಚಿಸಿತು. ಚರ್ಚೆಯ ನಂತರ ಈ ಪ್ರಕರಣದ ಕುರಿತು ಸರ್ಕಾರವು ತುರ್ತಾಗಿ 03 ದಿನಗಳೊಳಗಾಗಿ ಮಾಹಿತಿ ಸಲ್ಲಿಸುವಂತೆ ತಿಳಿಸಿದ್ದರಿಂದ, ನಿವೃತ್ತ ನ್ಯಾಯಾಧೀಶರು ನೀಡಿರುವ ವರದಿಯ ಉಪಸಂಹಾರದ ಮಾಹಿತಿಯನ್ನು ಈಗಾಗಲೇ ದಿನಾಂಕ:21-02-2022ರಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಕುಲಸಚಿವರು ನೀಡಿರುವ ಮಾಹಿತಿಯನ್ನು ಸಭೆಯು ಗಮನಿಸಿತು.ಈ ವಿಷಯಕ್ಕೆ ಸಂಬಂಧಿಸಿದಂತೆ ತುರ್ತಾಗಿ ಅಗತ್ಯ ಕ್ರಮವಹಿಸಬೇಕಾಗಿರುವುದರಿಂದ ಈ ಪ್ರಕರಣದ ಕುರಿತು ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇಲಾಖಾ ವಿಚಾರಣೆ ನಡೆಸಿ ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿ ನಿಯಮಾನುಸಾರ ಶೀಘ್ರವಾಗಿ ಕ್ರಮಕೈಗೊಳ್ಳಲು ಸಭೆಯು ಸೂಚಿಸಿತು.ಹಾಗೂ ಅದರಂತೆ ವಿಶ್ವವಿದ್ಯಾಲಯವು ಕೈಗೊಂಡ ಕ್ರಮದ ವರದಿಯನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ಸಭೆಯು ತೀರ್ಮಾನಿಸಿತು.

**2022–ಸಿಂ–1.15:** ದಿವಂಗತ ಮಂಜುಳಾಬಾಯಿ ವೈ. ಇವರ ಕುಟುಂಬಕ್ಕೆ ಅನುಕಂಪ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು.

ನಿರ್ಣಯ: ಈ ವಿಷಯದ ಕುರಿತು ಇದೇ ಸಭೆಯ ವಿಷಯ ಸಂಖ್ಯೆ **2022–ಸಿಂ–1.09** ರಲ್ಲಿ ತೆಗೆದುಕೊಂಡ ನಿರ್ಣಯವನ್ನು ಅನುಸರಿಸುವಂತೆ ಸಭೆಯು ನಿರ್ಣಯಿಸಿತು.

**2022–ಸಿಂ–1.16:** ದಿವಂಗತ ಸುರೇಶ್ ವೈ–ಇವರ ಕುಟುಂಬಕ್ಕೆ ಅನುಕಂಪ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು.

ನಿರ್ಣಯ: ಈ ವಿಷಯದ ಕುರಿತು ಇದೇ ಸಭೆಯ ವಿಷಯ ಸಂಖ್ಯೆ **2022–ಸಿಂ–1.09** ರಲ್ಲಿ ತೆಗೆದುಕೊಂಡ ನಿರ್ಣಯವನ್ನು ಅನುಸರಿಸುವಂತೆ ಸಭೆಯು ತಿಳಿಸಿತು.

**2022–ಸಿಂ–1.16(ಎ):** ವೃತ್ತಿಪದೋನ್ನತಿ (CAS) ಸಂಬಂಧ BOA / Screening cum Evaluation Committee ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

ಚರ್ಚೆ: ದಿನಾಂಕ:23–02–2022 ಮತ್ತು ದಿನಾಂಕ:24–02–2022 ರಂದು ನಡೆದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವೃತ್ತಿ ಪದೋನ್ನತಿಗಾಗಿ ನಡೆದ ನೇಮಕಾತಿ ಮಂಡಳಿ ಸಭೆಯ ನಡಾವಳಿಗಳ ಮುಚ್ಚಿದ ಲಕೋಟೆಗಳನ್ನು ಕುಲಸಚಿವರು ಸಭೆಯಲ್ಲಿ ತೆರೆದು ಸಭೆಯಲ್ಲಿ ಓದಿದರು. ಸದಸ್ಯರಾದ ಶ್ರೀ ಧರ್ಮಪ್ರಸಾದ್ ರವರು ಮಾತನಾಡಿ ವೃತ್ತಿ ಪದೋನ್ನತಿ ಆದೇಶ ತಕ್ಷಣ ಕೊಡಬೇಕು, ಆದೇಶದಲ್ಲಿ ಆರ್ಥಿಕ ಸೌಲಭ್ಯವನ್ನು ಅರ್ಹತಾ ದಿನಾಂಕದಿಂದ ಪಡೆಯುವುದು ಎಂದು ನಮೂದಿಸಬೇಕು ಹಾಗೂ ಇನ್ನು ಯಾರಿಗೆ ಅರ್ಹತೆ ಇದೆಯೋ ಅವರಿಗೆಲ್ಲ ತಕ್ಷಣ ದಿನಾಂಕ ನಿಗದಿಪಡಿಸಿ ವೃತ್ತಿ ಪದೋನ್ನತಿ ನೀಡಬೇಕು ಎಂದು ಆಗ್ರಹಿಸಿದರು.

ಕುಲಸಚಿವರು ವೃತ್ತಿ ಪದೋನ್ನತಿಯ ಆರ್ಥಿಕ ಸೌಲಭ್ಯ ಪಾವತಿಸುವ ಕುರಿತಂತೆ ಸರ್ಕಾರದಿಂದ ಬಂದಿರುವ ಪತ್ರವನ್ನು ಸಭೆಯಲ್ಲಿ ಓದಿದರು. ಅಲ್ಲದೇ ಈ ಕುರಿತು ಎ.ಜಿ. ಆಡಿಟ್ ನಲ್ಲಿ ಸುಮಾರು ರೂ.50 ಲಕ್ಷಕ್ಕೂ ಅಧಿಕ ಮೊತ್ತವನ್ನು ವಸೂಲಿ ಮಾಡಬೇಕೆಂದು ಸೂಚಿಸಿರುವುದನ್ನು ಸಹ ದಾಖಲೆ ಸಹಿತ ಸಭೆಯ ಗಮನಕ್ಕೆ ತಂದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಇವರು ಮಾತನಾಡಿ ವಿಶ್ವವಿದ್ಯಾಲಯವು ಸ್ವಾಯತ್ತ ಸಂಸ್ಥೆ ಆಗಿದ್ದು, ಯುಜಿಸಿ ಮಾರ್ಗಸೂಚಿಗಳನ್ನು ಅನುಸರಿಸುತ್ತದೆ. ಯುಜಿಸಿ ಮಾರ್ಗಸೂಚಿಯಲ್ಲಿ ಅರ್ಹತಾ ದಿನಾಂಕದಿಂದ(Date of eligibility) ಆರ್ಥಿಕ ಸೌಲಭ್ಯ ಪಾವತಿಸಬೇಕು ಎಂದು ನಮೂದಿಸಿದೆ. ಆದ್ದರಿಂದ ಅದರಂತೆ ಕ್ರಮಕೈಗೊಳ್ಳಬೇಕು ಎಂದರು. ವಿಶ್ವವಿದ್ಯಾಲಯವು ಅರ್ಹ ನೌಕರರಿಗೆ ವೃತ್ತಿಪದೋನ್ನತಿ ನೇಮಕಾತಿ ಮಂಡಳಿ ರಚಿಸದೆ ವಿಳಂಬ ಮಾಡಿದಲ್ಲಿ ನೌಕರರಿಗೆ ತೊಂದರೆಯಾಗುತ್ತದೆ ಎಂದರು.

ಕುಲಸಚಿವರು ಮಾತನಾಡಿ ವಿಶ್ವವಿದ್ಯಾಲಯಗಳು ಯುಜಿಸಿ ಮಾರ್ಗಸೂಚಿಗಳ ಜೊತೆಗೆ ರಾಜ್ಯ ಸರ್ಕಾರದ ಆದೇಶಗಳನ್ನು ಪಾಲಿಸಬೇಕಾಗುತ್ತದೆ ಉದಾಹರಣೆಗೆ ಬೋಧಕರ ನಿವೃತ್ತಿ ವಯಸ್ಸು 65 ಎಂದು ಯುಜಿಸಿ ಮಾರ್ಗಸೂಚಿಯಲ್ಲಿ ತಿಳಿಸಿದ್ದರೂ ಕೂಡ ರಾಜ್ಯ ಸರ್ಕಾರದ ಆದೇಶದಲ್ಲಿ ತಿಳಿಸಿರುವಂತೆ 62ನೇ ವಯಸ್ಸಿಗೆ ನಿವೃತ್ತಿಗೊಳಿಸಲಾಗುತ್ತಿದೆ ಎಂದರು. ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ನನಗೆ ಬಂದ ಮಾಹಿತಿ ಪ್ರಕಾರ 2018ರಲ್ಲಿ ಅರ್ಹತೆ ಹೊಂದಿರುವ ಒಬ್ಬರಿಗೆ ಇನ್ನೂ ವೃತ್ತಿ ಪದೋನ್ನತಿ ಆಗಿಲ್ಲ ಎನ್ನುತಿದ್ದಾರೆ. ಈ ರೀತಿ ಅರ್ಹತೆ ಇದ್ದೂ ನೇಮಕಾತಿ ಮಂಡಳಿ ರಚಿಸಿಲ್ಲ ಎಂದರೆ ವಿಶ್ವವಿದ್ಯಾಲಯದ ತಪ್ಪಾಗುತ್ತದೆ ಆದ್ದರಿಂದ ಇದನ್ನು ಸರಿಪಡಿಸಬೇಕಾಗುತ್ತದೆ ಎಂದರು.

ಕುಲಸಚಿವರು ಮಾತನಾಡಿ ಈ ಬಗ್ಗೆ ಪರಿಶೀಲಿಸಲಾಗುವುದು ಎಂದರು ಹಾಗೂ ಅರ್ಹತಾ ದಿನಾಂಕದಿಂದ ಆರ್ಥಿಕ ಸೌಲಭ್ಯ ವಿಸ್ತರಿಸುವ ಕುರಿತು ಸ್ಪಷ್ಟೀಕರಣ ಕೋರಿ ಸರ್ಕಾರಕ್ಕೆ ಈಗಾಗಲೇ ಪತ್ರ ಬರೆಯಲಾಗಿದೆ ಸ್ಪಷ್ಟೀಕರಣ ಬಂದ ನಂತರ ಅದರಂತೆ ಕ್ರಮಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ದಿನಾಂಕ:23-02-2022 ಹಾಗೂ 24-02-2022 ರಂದು ನಡೆದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಾಪಕರುಗಳ ವೃತ್ತಿ ಪದೋನ್ನತಿ ಸಂಬಂಧ ನಡೆದ ನೇಮಕಾತಿ ಮಂಡಳಿ ಸಭೆಗಳ (B.O.A.) ನಡಾವಳಿಗಳನ್ನು ಸಭೆಯು ಅನುಮೋದಿಸಿತು. ಯುಜಿಸಿ/ರಾಜ್ಯಸರ್ಕಾರಗಳ ನಿಯಮಾನುಸಾರ ಅರ್ಹತಾ ದಿನಾಂಕ ಗಳನ್ನು ನಿಗದಿಗೊಳಿಸಲು ತೀರ್ಮಾನಿಸಿ, ಅರ್ಹತಾ ದಿನಾಂಕದಿಂದ (Date of eligibility) ಆರ್ಥಿಕ ಸೌಲಭ್ಯ ಪಾವತಿಸುವ ಕುರಿತಂತೆ ಸರ್ಕಾರದ ಸ್ಪಷ್ಟೀಕರಣ ಬಂದ ನಂತರ ಕ್ರಮಕೈಗೊಳ್ಳುವಂತೆ ನಿರ್ಣಯಿಸಲಾಯಿತು. ಸರ್ಕಾರದಿಂದ ಸ್ಪಷ್ಟೀಕರಣ ಬರುವವರೆಗೆ ಪ್ರಸ್ತುತ ಅನುಸರಿಸುತ್ತಿರುವಂತೆ ಸಿಂಡಿಕೇಟ್ ಅನುಮೋದನೆ ದಿನಾಂಕದಿಂದ ಆರ್ಥಿಕ ಸೌಲಭ್ಯ ಪಾವತಿಸಲು ಸಭೆಯು ಅನುಮೋದಿಸಿತು.

**2022-ಸಿಂ-1.16(ಬಿ):** ವಿಶ್ವವಿದ್ಯಾಲಯದ ವಕೀಲರ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿರುವ ಆದೇಶವನ್ನು ಸ್ಥಿರೀಕರಿಸುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದ ವಕೀಲರ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿರುವ ಆದೇಶವನ್ನು ಸ್ಥಿರೀಕರಿಸುವ ಕುರಿತು ವಿಷಯವನ್ನು ಮುಂದಿನ ಸಭೆಯಲ್ಲಿ ಮಂಡಿಸುವಂತೆ ಸಭೆಯು ತಿಳಿಸಿತು.

**2022-ಸಿಂ-1.16(ಎ):** ವೈದ್ಯಕೀಯ ಚಿಕಿತ್ಸಾ ವೆಚ್ಚವನ್ನು ಪಾವತಿಸುವ ಕುರಿತು.

ನಿರ್ಣಯ : ವೈದ್ಯಕೀಯ ಚಿಕಿತ್ಸಾ ವೆಚ್ಚವನ್ನು ಪಾವತಿಸಲು ಸಭೆಯು ಒಪ್ಪಿಗೆ ನೀಡಿತು.

## ಪರೀಕ್ಷಾ ವಿಭಾಗ

**2022–ಸಿಂ–1.17 :** M/s KEONICS Bangalore – ಇವರ ಮೂಲಕ ವಿಶ್ವವಿದ್ಯಾಲಯದಲ್ಲಿ EDGS ಜಾರಿಗೊಳಿಸುವ ಸಂಬಂಧ ಸಿಂಡಿಕೇಟ್ ಸಭೆಗೆ ವಿಷಯವನ್ನು ಮಂಡಿಸುತ್ತಿರುವ ಕುರಿತು.

**ನಿರ್ಣಯ :** ವಿಷಯವನ್ನು ಮುಂದೂಡಲಾಯಿತು

**2022–ಸಿಂ–1.18 :** ಈಗಾಗಲೇ ಇ–ಟೆಂಡರ್ ಮೂಲಕ ಪಡೆಯಲಾದ ಬಾಡಿಗೆ ವಾಹನಗಳ ದರಗಳನ್ನು ಪರಿಷ್ಕರಿಸುವ ಕುರಿತು.

**ನಿರ್ಣಯ :** ವಿಷಯವನ್ನು ಮುಂದೂಡಲಾಯಿತು.

**2022–ಸಿಂ–1.19 :** ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ Revaluation & Re-Total etc., Per Paper Fees ಗಳನ್ನು ಪರಿಷ್ಕರಿಸುವ ಕುರಿತು.

**ನಿರ್ಣಯ :** ವಿಷಯವನ್ನು ಮುಂದೂಡಲಾಯಿತು.

**2022–ಸಿಂ–1.20 :** ಪರೀಕ್ಷಾ ಕಾರ್ಯಗಳನ್ನು ಹೊರಗುತ್ತಿಗೆಯ ಮೂಲಕ ನಿರ್ವಹಿಸುವ ಕುರಿತು.

**ನಿರ್ಣಯ :** ವಿಷಯವನ್ನು ಮುಂದೂಡಲಾಯಿತು.

**2022–ಸಿಂ–1.21 :** ಸ್ನಾತಕ (ರೆಗ್ಯೂಲರ್/ದೂರಶಿಕ್ಷಣ) ಪದವಿ ಪರೀಕ್ಷಾ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ / ಮೂರನೇ ಮೌಲ್ಯಮಾಪನ ಮತ್ತು ಸ್ನಾತಕೋತ್ತರ (ರೆಗ್ಯೂಲರ್/ದೂರಶಿಕ್ಷಣ) ಸವಾಲಿನ ಮೌಲ್ಯಮಾಪಕರಿಗೆ ಸಂಭಾವನಾ ದರ ಪರಿಷ್ಕರಿಸುವ ಕುರಿತು.

**ನಿರ್ಣಯ :** ವಿಷಯವನ್ನು ಮುಂದೂಡಲಾಯಿತು.

**2022–ಸಿಂ–1.22 :** ಪ್ರಥಮ ವರ್ಷದ ಸ್ನಾತಕ ವಿದ್ಯಾರ್ಥಿಗಳಿಗೆ ಹೊಸ ಶಿಕ್ಷಣ ನೀತಿ ಅನ್ವಯ (NEP) ಪರೀಕ್ಷೆ ಮತ್ತು ಮೌಲ್ಯಮಾಪನದ ದರಗಳನ್ನು ಅನುಷ್ಠಾನಗೊಳಿಸುವ ಕುರಿತು.

**ನಿರ್ಣಯ :** ವಿಷಯವನ್ನು ಮುಂದೂಡಲಾಯಿತು

**2022–ಸಿಂ–1.23 :** ಪಿ.ಹೆಚ್.ಡಿ. ಕೋರ್ಸ್‌ವರ್ಕ್ ಪರೀಕ್ಷಾ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ.

**ನಿರ್ಣಯ :** ವಿಷಯವನ್ನು ಮುಂದೂಡಲಾಯಿತು

**2022–ಸಿಂ–1.24 :** ಮೇ:ಯುನಿಕ್ಲೇರ್ ಸಂಸ್ಥೆಯಿಂದ ಪಡೆದ e-governance ಸೇವೆಗಳ ಕುರಿತು.

**ನಿರ್ಣಯ :** ವಿಷಯವನ್ನು ಮುಂದೂಡಲಾಯಿತು

## ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ

**2022–ಸಿಂ–1.25 :** ಕಲಿಕಾರ್ಥಿ ಸೇವಾ ಕೇಂದ್ರಗಳ ಘೋಷಣೆ ಹಾಗೂ ರದ್ದುಪಡಿಸಲಾದ ಕೇಂದ್ರದ ಅಧಿಸೂಚನೆ ಅನುಮೋದಿಸುವ ಕುರಿತು.

**ನಿರ್ಣಯ :** ವಿಷಯವನ್ನು ಮುಂದೂಡಲಾಯಿತು

## ಹಣಕಾಸು ವಿಭಾಗ

**2022–ಸಿಂ–1.26** : 2021–22ನೇ ಆರ್ಥಿಕ ವರ್ಷದ ಪ್ರಥಮ ಹಾಗೂ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದನೆ ಕುರಿತು.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು

## ಅಭಿವೃದ್ಧಿ ವಿಭಾಗ

**2022–ಸಿಂ–1.27** : ಕಾರು ಮೈಲೇಜ್ ದರವನ್ನು ನಿಗದಿ ಪಡಿಸುವ ಕುರಿತು.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು

## ಶೈಕ್ಷಣಿಕ ವಿಭಾಗ

**2022–ಸಿಂ–1.28** : "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್., ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ." ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕವನ್ನು ಸ್ಥಾಪಿಸುವ ಕುರಿತು.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು

**2022–ಸಿಂ–1.29** : "ಲೇಟ್ ಎಸ್.ಡಿ. ಪುಷ್ಪ, ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ." ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕವನ್ನು ಸ್ಥಾಪಿಸುವ ಕುರಿತು.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು

**2022–ಸಿಂ–1.30** : ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗ – ಈ ಕಾಲೇಜಿನ "ವಾಣಿಜ್ಯ ಮತ್ತು ನಿರ್ವಹಣಾ" ವಿಭಾಗಗಳ ಸಂಶೋಧನಾ ಕೇಂದ್ರದ ಮಾನ್ಯತೆ ಕುರಿತು.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು

**2022–ಸಿಂ–1.31** : ಸರ್.ಎಂ.ವಿ. ಸರ್ಕಾರಿ ವಿಜ್ಞಾನ ಕಾಲೇಜು, ಬೊಮ್ಮನಕಟ್ಟೆ – ಈ ಸಂಸ್ಥೆಯ "ಔದ್ಯೋಗಿಕ ರಸಾಯನಶಾಸ್ತ್ರ" ವಿಭಾಗದ "ಸಂಶೋಧನಾ ಕೇಂದ್ರ"ದ ಮಾನ್ಯತೆ ಕುರಿತು.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು

**2022–ಸಿಂ–1.32** : ಸ್ನಾತಕೋತ್ತರ ಸಮಾಜಕಾರ್ಯ ವಿಭಾಗಕ್ಕೆ ದಾಖಲಾಗುವ ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು ತುಮಕೂರು ವಿಶ್ವವಿದ್ಯಾಲಯದ ಶುಲ್ಕಪಟ್ಟಿಯನ್ವಯ ಪರಿಷ್ಕರಿಸುವ ಕುರಿತು.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು

## ಕಾಲೇಜು ಅಭಿವೃದ್ಧಿ ವಿಭಾಗ

2022–ಸಿಂ–1.33 : ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳ 2021–22ನೇ ಸಾಲಿನ ಸ್ಥಳೀಯ ತಪಾಸಣಾ ಸಮಿತಿಗಳ ವರದಿಗಳನ್ನು ಘಟನೋತ್ತರ ಅನುಮೋದನೆ ಮಂಡಿಸುವ ಬಗ್ಗೆ.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು

2022–ಸಿಂ–1.34 : ಕಾಲೇಜಿನ ಹೆಸರನ್ನು ತಿದ್ದುಪಡಿ ಮಾಡುವ ಕುರಿತು.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು

## ಯು.ಸಿ.ಸಿ.ಎಫ್ ವಿಭಾಗ

2022–ಸಿಂ–1.35: ವಿಶ್ವವಿದ್ಯಾಲಯಲ್ಲಿ ಸರ್ಕಾರದ ಇ–ಆಫೀಸ್ ತಂತ್ರಾಂಶವನ್ನು ಅಳವಡಿಸಿಕೊಂಡು ಜಾರಿಗೊಳಿಸುವ ಬಗ್ಗೆ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು.

## ಎಸ್ಟೇಟ್ ವಿಭಾಗ

2022–ಸಿಂ–1.36: ವಿಶ್ವವಿದ್ಯಾಲಯದ ಆವರಣದ "ಎರೆಹುಳು ಗೊಬ್ಬರ ತಯಾರಿಕಾ ಘಟಕ" ನಿರ್ವಹಣೆ ಕುರಿತು.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು.

2022–ಸಿಂ–1.37: ವಿಜ್ಞಾನ ಕೇಂದ್ರ ಕೆಟಗರಿ–2 ಸ್ಥಾಪನೆಗೆ ಸಹ್ಯಾದ್ರಿ ಕಾಲೇಜ್ ಆವರಣದ ಜಮೀನನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ವಿದ್ಯುನ್ಮಾನ,ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ–ಬೆಂಗಳೂರು ಇವರಿಗೆ ಹಸ್ತಾಂತರಿಸುವ ಬಗ್ಗೆ.

ಚರ್ಚೆ : ಕುಲಸಚಿವರು ಮಾತನಾಡಿ ಕಳೆದ ವಾರ ಎರಡು ಸಮಿತಿಗಳು ಭೇಟಿ ನೀಡಿದ್ದವು ಮೊದಲನೆಯದಾಗಿ ವಿಜ್ಞಾನ ಕೇಂದ್ರ ಸ್ಥಾಪನೆ ಕುರಿತು ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ – ಇವರು ನವುಲೆ ಗ್ರಾಮದ 8 ಎಕರೆ ಜಾಗದಲ್ಲಿ ವಿಜ್ಞಾನ ಕೇಂದ್ರ ಕೆಟಗರಿ–2 ಸ್ಥಾಪನೆ ಕುರಿತು ವಿಸ್ತೃತ ಯೋಜನೆಯನ್ನು ತಯಾರಿಸಿ, ನಿರ್ದೇಶಕರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ, ಪ್ರೋತ್ಸಾಹಕ ಸೊಸೈಟಿ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಬೆಂಗಳೂರು – ಇವರಿಗೆ ಸಲ್ಲಿಸಿದ್ದರು. ಈ ಕುರಿತು ನ್ಯಾಷನಲ್ ಕೌನ್ಸಿಲ್ ಆಫ್ ಸೈನ್ಸ್ ಮ್ಯೂಸಿಯಂ(NCSM), ಸಂಸ್ಕೃತ ಸಚಿವಾಲಯ, ಭಾರತ ಸರ್ಕಾರದ 5 ಜನ ಅಧಿಕಾರಿಗಳನ್ನೊಳಗೊಂಡ ಸಮಿತಿಯು ದಿನಾಂಕ:18–02–2022ರಂದು ಶಿವಮೊಗ್ಗಕ್ಕೆ ಆಗಮಿಸಿ ಉದ್ದೇಶಿತ ಸ್ಥಳದ ಪರಿಶೀಲನೆಯನ್ನು ಕೈಗೊಂಡಿತ್ತು. ಆದರೆ ಸದರಿ ಪ್ರದೇಶವು ನಗರದಿಂದ ದೂರ ಇದೆ ಹಾಗೂ ಅಭಿವೃದ್ಧಿ ಹೊಂದಿರುವುದಿಲ್ಲ ಎಂಬ ಕಾರಣಕ್ಕೆ ವಿಜ್ಞಾನ ಕೇಂದ್ರ ಕೆಟಗರಿ–2 ಅಲ್ಲಿ ಸ್ಥಾಪಿಸಲು ಸಮಿತಿಯು ತಮ್ಮ ಒಪ್ಪಿಗೆಯನ್ನ ಸೂಚಿಸಿರುವುದಿಲ್ಲ. ನಂತರ ಮಾನ್ಯ ಲೋಕಸಭಾ ಸದಸ್ಯರು, ಶಿವಮೊಗ್ಗ ಜಿಲ್ಲೆ ಇವರ ಉಪಸ್ಥಿತಿಯಲ್ಲಿ, ಜಿಲ್ಲಾಡಳಿತದ ಅಧಿಕಾರಿಗಳು ಸೇರಿ ಬೇರೆ ಎಲ್ಲೂ ಸೂಕ್ತ ಜಾಗ ಕಂಡುಬರದ ಕಾರಣ ಸಹ್ಯಾದ್ರಿ ಕಾಲೇಜು ಶಿವಮೊಗ್ಗ – ಇಲ್ಲಿನ ಖಾಲಿ ಜಾಗವನ್ನು ಸಮಿತಿಯವರಿಗೆ ತೋರಿಸಿದಾಗ ಈ ಜಾಗ ಸೂಕ್ತವಿರುವುದಾಗಿ ಸಮಿತಿಯವರು ತಕ್ಷಣ ಒಪ್ಪಿಗೆ ಸೂಚಿಸಿರುತ್ತಾರೆ. ಆದ್ದರಿಂದ ಸುಮಾರು 7–00 ಎಕರೆ ಜಾಗವನ್ನು ನಿರ್ದೇಶಕರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ, ಪ್ರೋತ್ಸಾಹಕ ಸೊಸೈಟಿ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಬೆಂಗಳೂರು– ಇವರ ಹೆಸರಿಗೆ ದಾಖಲಿಸಿ ಸದರಿ ಜಾಗವನ್ನು ಚೆಕ್ ಬಂದಿ ವಿವರಗಳೊಂದಿಗೆ ತಯಾರಿಸಿ ಹಸ್ತಾಂತರಿಸಲು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ – ಇವರು ಕೋರಿರುತ್ತಾರೆ ಎಂದು ಕುಲಸಚಿವರು ಸಭೆಗೆ ತಿಳಿಸಿದರು.

ವಿಜ್ಞಾನ ಕೇಂದ್ರ ಕೆಟಗರಿ-2 ಇದು ಬೆಂಗಳೂರಿನಲ್ಲಿರುವ ವಿಶ್ವೇಶ್ವರಯ್ಯ ಮ್ಯೂಸಿಯಂನಂತೆಯೇ ಇರುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ ವಿಜ್ಞಾನ ಕೇಂದ್ರ ಆರಂಭಿಸುವುದರಿಂದ ವಿದ್ಯಾರ್ಥಿಗಳು/ ಬೋಧಕರು ವೈಜ್ಞಾನಿಕ ಶಿಕ್ಷಣವನ್ನು ಪಡೆಯುವುದರ ಜೊತೆಗೆ ಸಂಶೋಧನೆಗೆ ಅಗತ್ಯ ಸೌಲಭ್ಯ ದೊರೆಯುತ್ತದೆ. ಅಲ್ಲದೆ ನಾಗರಿಕರಲ್ಲೂ ವೈಜ್ಞಾನಿಕ ಮನೋಭಾವ ಮೂಡಿಸಲು ಸಹಾಕಾರಿಯಾಗುತ್ತದೆ ಎಂದರು. ಇದಕ್ಕೆ ಎಲ್ಲ ಸದಸ್ಯರು ಸಹಮತ ವ್ಯಕ್ತಪಡಿಸಿದರು.

ಮುಂದುವರಿದು ಮಾತನಾಡಿದ ಕುಲಸಚಿವರು ಆದರೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ – 2000ರ 3(4)ರ ಪ್ರಕಾರ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದುಕೊಳ್ಳದೇ ವಿಶ್ವವಿದ್ಯಾಲಯವು ಯಾವುದೇ ಚರಾ ಮತ್ತು ಸ್ಥಿರ ಸ್ವತ್ತನ್ನು ಗುತ್ತಿಗೆ ಅಥವಾ ಬಾಡಿಗೆ ನೀಡಲು, ಮಾರಾಟ ಅಥವಾ ವರ್ಗಾವಣೆ ಮಾಡಲು ಅವಕಾಶವಿರುವುದಿಲ್ಲ ಎಂಬ ಅಂಶವನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪರವರು ಮಾತನಾಡಿ ಸಹ್ಯಾದ್ರಿ ಕಾಲೇಜು ಜಾಗವನ್ನು ನೀಡಿದರೆ ಇದಕ್ಕೆ ಅಲ್ಲಿಯ ವಿದ್ಯಾರ್ಥಿಗಳು ಅಥವಾ ಸುತ್ತಮುತ್ತಲಿನ ನಾಗರಿಕರು ಅಥವಾ ಇನ್ನಾರಿಂದಲಾದರೂ ವಿರೋಧ ಬರುವ ಸಂಭವ ಇಲ್ಲವೇ ಎಂದರು. ಕುಲಸಚಿವರು ಇದು ಶೈಕ್ಷಣಿಕ ವಿಷಯವೇ ಆಗಿರುವುದರಿಂದ ಯಾವುದೇ ವಿರೋಧ ಬರುವ ಸಂಭವ ಇರುವುದಿಲ್ಲ ಎಂದರು. ಇದಕ್ಕೆ ಎಲ್ಲ ಸದಸ್ಯರು ಸಹಮತ ವ್ಯಕ್ತಪಡಿಸಿದರು.

ನಿರ್ಣಯ : ಸುಧೀರ್ಘ ಚರ್ಚೆಯ ನಂತರ ವಿಜ್ಞಾನ ಕೇಂದ್ರ ಆರಂಭಿಸುವುದರಿಂದ ವಿದ್ಯಾರ್ಥಿಗಳು/ ಬೋಧಕರು ವೈಜ್ಞಾನಿಕ ಶಿಕ್ಷಣವನ್ನು ಪಡೆಯುವುದರ ಜೊತೆಗೆ ಸಂಶೋಧನೆಗೆ ಅಗತ್ಯ ಸೌಲಭ್ಯ ದೊರೆಯುತ್ತದೆ. ಹಾಗೂ ನಾಗರಿಕರಲ್ಲೂ ವೈಜ್ಞಾನಿಕ ಮನೋಭಾವ ಮೂಡಿಸಲು ಸಹಾಕಾರಿಯಾಗುವುದರಿಂದ ಈ ಕುರಿತು ಅನುಮತಿ ಕೋರಿ ಸರ್ಕಾರಕ್ಕೆ ಪತ್ರ ಬರೆಯಲು ಹಾಗೂ ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ ಸಹ್ಯಾದ್ರಿ ಕಾಲೇಜಿನ 7-00 ಎಕರೆ ಜಮೀನ್ನು ನಿರ್ದೇಶಕರು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ, ಪ್ರೋತ್ಸಾಹಕ ಸೊಸೈಟಿ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ - ಬೆಂಗಳೂರು ಇವರಿಗೆ ಹಸ್ತಾಂತರಿಸಲು ನಿಯಮಾನುಸಾರ ಕ್ರಮಕೈಗೊಳ್ಳಲು ಸಭೆಯು ಒಪ್ಪಿಗೆ ನೀಡಿತು.

ಮುಂದುವರೆದು ಮಾತನಾಡಿದ ಕುಲಸಚಿವರು ಎರಡನೆಯದಾಗಿ ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಇಲಾಖೆಯ ವತಿಯಿಂದ ವಿಶ್ವವಿದ್ಯಾಲಯದ ಭೂ ಹಸ್ತಾಂತರ ವಿಷಯದ ಕುರಿತು ಪರಿಶೀಲಿಸಲು ಬೆಂಗಳೂರಿನ ಸಬ್-ರೀಜನಲ್ ಸೆಂಟರ್‌ನಲ್ಲಿರುವ ಕೇಂದ್ರ ಸರ್ಕಾರದ ಅಧಿಕಾರಿಯಾದ Sri B.N. Anjan Kumar, Asst. Inspector General of Forests (Central) IRO ಹಾಗೂ Dr. Prabhu, Scientist, 'D' IRO Bangalore ಇವರನ್ನು ನಿಯೋಜಿಸಿದ್ದು, ಸದರಿ ಸಮಿತಿಯು ವಿಶ್ವವಿದ್ಯಾಲಯದ ವತಿಯಿಂದ ಸಿದ್ದಪಡಿಸಲಾಗಿದ್ದ PPT ಯನ್ನು ವೀಕ್ಷಿಸಿದ್ದು ಸ್ಥಳ ಪರಿಶೀಲನೆಯನ್ನು ನಡೆಸಿ ಸಕಾರಾತ್ಮಕ ಪ್ರತಿಕ್ರಿಯೆ ನೀಡಿರುತ್ತದೆ. ಸ್ಥಳ ತನಿಖಾ ವರದಿಯನ್ನು FAC ಸಮಿತಿಯಲ್ಲಿಟ್ಟು, NPV ಮೊತ್ತವನ್ನು ಕಟ್ಟಲು ಸೂಚಿಸಿದಾಗ ಭೂ ಹಸ್ತಾಂತರ ವಿಷಯ ಬಗೆಹರಿಯುತ್ತದೆ ಎಂದು ಸಭೆಗೆ ತಿಳಿಸಿದರು. ಇದಕ್ಕೆ ಎಲ್ಲ ಸದಸ್ಯರುಗಳು ಹರ್ಷ ವ್ಯಕ್ತಪಡಿಸಿದರು.

## ದಾಸ್ತಾನು ಖರೀದಿ ವಿಭಾಗ

**2022-ಸಿಂ-1.38** : ವಿಶ್ವವಿದ್ಯಾಲಯದ ಪ್ರಸಾರಂಗ ವಿಭಾಗದ ಪಠ್ಯಪುಸ್ತಕ / ಪತ್ರಿಕೆ / ಜರ್ನಲ್‌ಗಳ ಮುದ್ರಣ ಮತ್ತು ಸರಬರಾಜು ಮಾಡುವ ಸಂಬಂಧದ ಇ-ಟೆಂಡರ್ ಅಂಗೀಕರಿಸುವ ಕುರಿತು.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು

**2022–ಸಿಂ–1.39 :** ದಿನಾಂಕ:08–02–2022 ರಂದು ನಡೆದ ಖರೀದಿ ಸಮಿತಿ ಸಭೆ ನಡಾವಳಿ ಅನುಮೋದನೆ ಬಗ್ಗೆ.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು

**ಇಂಜಿನಿಯರಿಂಗ್ ವಿಭಾಗ**

**2022–ಸಿಂ–1.40 :** ದಿನಾಂಕ:09–02–2022ರಂದು ನಡೆದ ಕಟ್ಟಡ ಸಮಿತಿ ಸಭೆಯ ನಡಾವಳಿಯ ಅನುಮೋದನೆ ಕುರಿತು.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು.

**2021–ಸಿಂ–ವಿ–1.02:** ಸದಸ್ಯರುಗಳು ಮಂಡಿಸಿರುವ ಪ್ರಸ್ತಾವನೆಗಳು:

1. ಶ್ರೀ ಬಳ್ಳೆಕೆರೆ ಸಂತೋಷ್.
2. ಶ್ರೀ ರಾಮಲಿಂಗಪ್ಪ ಹೆಚ್.
3. ಶ್ರೀ ಧರ್ಮಪ್ರಸಾದ್ ಜಿ.
4. ಶ್ರೀ ಹೆಚ್.ಬಿ. ರಮೇಶ್‌ಬಾಬು.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು.

**2022–ಸಿಂ–1.41:** ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ : ರಾಜ್ಯಪಾಲರ ಕಛೇರಿಯಿಂದ ಬಂದ ಪತ್ರ.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು

**ದಿನಾಂಕ:27–10–2021 ರ ಸಿಂಡಿಕೇಟ್ ಸಾಮಾನ್ಯ ಸಭೆಯ ಮುಂದೂಡಿದ ವಿಷಯ :**

**ಶೈಕ್ಷಣಿಕ ವಿಭಾಗ**

**2021–ಸಿಂ–3.17(ಇ):** Design, Develop, Implementation & Maintenance of Fraternity Platform Infrastructure (FPI) ನ್ನು ವಿಶ್ವವಿದ್ಯಾಲಯದಲ್ಲಿ ಆರಂಭಿಸಲು ಉದ್ದೇಶಿಸಿರುವ ಬಗ್ಗೆ.

ನಿರ್ಣಯ : ವಿಷಯವನ್ನು ಮುಂದೂಡಲಾಯಿತು.

**2022–ಸಿಂ–1.42:** ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು :

– ಯಾವುದೂ ಇರುವುದಿಲ್ಲ –

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/–
ಕುಲಪತಿಗಳು